ಅಪರಂಜಿ

ಏಪ್ರಿಲ್ 2005

ತಿಳಿನಗೆಯ ಕಾರಂಜಿ



ಪ್ರಕಾಶ್
ಶಿವಕುಮಾರ್
ಬಾಗೂರು ಚಂದ್ರು
ಎಂ.ಆರ್. ಶ್ರೀನಿವಾಸಮೂರ್ತಿ
ಎಚ್. ಗೋಪಾಲಕೃಷ್ಣ
ಗುರು
ಪು.ರ.
ವನಂಲಿ
ಚಂಬಾ
ಆನಂದ
ಇಂದು ರಮೇಶ್
ಬೇಲೂರು ರಾಮಮೂರ್ತಿ
ಜೇಕೆ

ಬಿಡಿ ಪ್ರತಿ: ರೂ. 10.00

ಅಪರಂಜಿ

ತಿಳಿನಗೆಯ ಕಾರಂಜಿ



ಚಂದಾ ವಿವರ:

ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್ ಟೆಕ್

ಈ ಸಂಚಿಕೆಯಲ್ಲಿ .....



ಸಂಪುಟ 22 ಸಂಚಿಕೆ – 7

ಏಪ್ರಿಲ್ – 2005

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003 ದೂರವಾಣಿ: 080- 23345259
email: aparanji@hotmail.com website: aparanjimag.com



○ ಪ್ರಕಾಶ್

ಜಮೀನು ಕೊಳ್ಳಲು ಕೇವಲ ಕಾನೂನು ಅವಕಾಶ ಸಾಲದು

- ಹೇಳಿಕೆ

ಹೌದು, ಹಣ ಬೇಕಲ್ಲ!!

★★★

ರಾಜಕಾರಣಿಗಳು, ಕಲಾವಿದರು ನಟಿಸುತ್ತಲೇ ಇರಬೇಕು!

- ಮಾಜೀ ರಾಜ್ಯಪಾಲರು

ಕರಾಳ ಸತ್ಯ ಎಂದರೆ ಇದೇ!

★★★

ಆಹ್ವಾನಕ್ಕೆ ಕಾದಿರುವ ಮುಷರಫ್

- ಸುದ್ದಿ

ಬೀದಿಯಲ್ಲಿ ಹೋಗುವ ಮಾರೀನ...!!

★★★

ಗೋವಾದಲ್ಲಿ ರಾಷ್ಟ್ರಪತಿ ಆಡಳಿತ

- ಸುದ್ದಿ

ಇಬ್ಬರ ಜಗಳ, ದೆಹಲಿಗೆ ಲಾಭ!!

★★★

ಇನ್ನಿಂಗ್ಸ್ ಆರಂಭ; ಗೌತಮ್ ಗಂಭೀರ!

- ಕ್ರೀಡಾ ಸುದ್ದಿ

ಸುದ್ದಿ ಅಂದರೆ ಹೀಗಿರಬೇಕು!!

★★★

ಜಾರ್ಖಂಡ್; ನಾಳೆ ವಿಶ್ವಾಸ ಮತ

- ಸುದ್ದಿ

‘ವಿಶ್ವಾಸ’ ಪದದ ಅರ್ಥವೇ ಬದಲಾಗಿ ಹೋಗಿದೆ.

★★★

‘ಸಾನಿಯಾ’, ‘ಸೋನಿಯಾ’ ಹೆಸರುಗಳನ್ನು ನೋಡಿ ಮುದ್ರಾರಾಕ್ಷಸ ಗಹಗಹಿಸಿ ನಕ್ಕನಂತೆ!


★★★

ಜಯದೇವ ಆಸ್ಪತ್ರೆಯ ಅವ್ಯವಹಾರ; ತನಿಖೆಗೆ ಸಮಿತಿ ರಚನೆ

- ಪತ್ರಿಕೆ

ಹೃತ್ಪೂರ್ವಕವಾಗಿ ತನಿಖೆ ನಡೆಯಲಿ!

★★★



ನಮ್ಮ ನಿಮ್ಮಲ್ಲಿ

''ಒಂದೊಂದು ಹಂತದಲ್ಲೂ ಬಹಳ ನಾಜೂಕಿನಿಂದ ಮುಂದುವರಿಯಬೇಕು. ಕೊನೆಯ ಗುರಿ ಅಷ್ಟು ಮುಖ್ಯವಲ್ಲ. ತೊಡಗಿಸಿಕೊಂಡಿರುವ ಕೆಲಸದಲ್ಲೇ ಸಂತಸ, ಆನಂದ, ನೆಮ್ಮದಿ ಪಡೆಯುವ ಕಲೆಯನ್ನು ರೂಢಿಸಿಕೊಳ್ಳಿ.''

ಈ ಹೇಳಿಕೆಯನ್ನು ಕೇಳಿ, ಇದ್ಯಾವುದೋ ಹೊಸ ಸುಖಬೋಧಾನಂದರೋ, ಶ್ರೀ ಶ್ರೀ ಶ್ರೀ to the power of infinity ಯವರೋ ನೀಡಿದ ಅಮೃತ ವಚನ ಅಂದುಕೊಳ್ಳಬೇಡಿ. ಖ್ಯಾತ ವರ್ಣಚಿತ್ರಕಾರ ಕೆ.ಟಿ. ಶಿವಪ್ರಸಾದ್, ಜಲವರ್ಣ ಚಿತ್ರ ರಚನೆಯ ಗುಟ್ಟನ್ನು ನಮ್ಮಗಳೊಂದಿಗೆ ಹಂಚಿಕೊಳ್ಳುತ್ತಾ ಹೇಳಿದ ಮಾತುಗಳಿವು.

ಜೀವನದಲ್ಲಿ ಎಷ್ಟೋ ತಪ್ಪುಗಳನ್ನು ಮಾಡುತ್ತೇವೆ, ಇದೊಂದು ಏನು ಮಹಾ ಅಂದುಕೊಂಡು, ಕಳೆದ ತಿಂಗಳು ನಾನು ಜಲವರ್ಣ ಚಿತ್ರ ರಚನೆಯ ಹವ್ಯಾಸೀ ಕಾಯಾಗಾರವೊಂದನ್ನು ಸೇರಿಯೇಬಿಟ್ಟೆ. ಕಾರ್ಯಾಗಾರವನ್ನು ಚಾಲನೆಗೊಳಿಸಿದವರು, ಕರ್ನಾಟಕ ಚಿತ್ರಕಲಾ ಪರಿಷತ್ತಿನವರು. ಈ ಕಾರ್ಯಾಗಾರದ ವಿಷಯ ನನಗೆ ಗೊತ್ತಾದದ್ದೇ ಒಂದು ವಿಶಿಷ್ಟ ಸನ್ನಿವೇಶದಲ್ಲಿ. ಪ್ರಸಿದ್ಧ ಚಿತ್ರಕಾರ ವೆಂಕಟಪ್ಪನವರ ಎರಡು ವರ್ಣಚಿತ್ರಗಳನ್ನು ಒಂದು ವಿಶೇಷ ಪ್ರದರ್ಶನದ ಸಲುವಾಗಿ ಎರವಲು ಪಡೆಯಲು ಹಲವು ತಿಂಗಳುಗಳ ಹಿಂದೆ ಕಲಾ ಪರಿಷತ್ತಿನ ಕಮಲೇಶ್ ಹಾಗೂ ಭೌಟಾ ನಮ್ಮ ಮನೆಗೆ ಬಂದಿದ್ದರು. ಈ ಕೃತಿಗಳನ್ನು ವೆಂಕಟಪ್ಪನವರೇ ಪ್ರೀತಿ ವಿಶ್ವಾಸಗಳಿಂದ ನಮ್ಮ ತಂದೆಯವರಿಗೆ ಬಹು ಹಿಂದೆ ಕೊಟ್ಟಿದ್ದರು. ಲೋಕಾಭಿರಾಮವಾಗಿ ಅದೂ ಇದೂ ಮಾತನಾಡಿದ ಮೇಲೆ, ನಾನು ನನ್ನ ಇಂಗ್ಲೆಂಡ್ ಪ್ರವಾಸದ ಸಮಯದಲ್ಲಿ ರಚಿಸಿದ್ದು ಪೆನ್ಸಿಲ್ ಸ್ಕೆಚ್‌ಗಳ ಕಂತೆಯೊಂದನ್ನು ತೆಗೆದು ಕಮಲೇಶರ ಮುಂದಿಟ್ಟೆ. ಬಹು ಗಂಭೀರ ವದನದಿಂದ ಕಮಲೇಶರು ಈ ಚಿತ್ರಗಳನ್ನು ವೀಕ್ಷಿಸತೊಡಗಿದರು. ಅವರಿಗೆ ಬೇರೇ ಮಾರ್ಗವೇ ಇರಲಿಲ್ಲ ಅನ್ನಿ. ವೆಂಕಟಪ್ಪನವರ ಚಿತ್ರಗಳು ಇನ್ನೂ ಗೋಡೆಯಮೇಲೇ ಇದ್ದುವಲ್ಲ.

ಇದೊಂದು ಎಲ್ಲ ಉದಯೋನ್ಮುಖ ಬರಹಗಾರರಿಗೂ ಆಗಿರಲೇ ಬೇಕಾದ ಅನುಭವ. ನಮಗೆ ಚೆನ್ನಾಗಿದೆ ಅನ್ನಿಸಿದ ನಮ್ಮ ಕೃತಿಯೊಂದನ್ನು ಒಬ್ಬ ಖ್ಯಾತ ಬರಹಗಾರ ಮಿತ್ರನಿಗೆ ''ಓದಿ, ಅಭಿಪ್ರಾಯ ಹೇಳು'' ಅಂತ ಹೇಳಿ ಅವನ ಕೈಗೆ ನಿಮ್ಮ ಅಮೂಲ್ಯ ಕೃತಿಯನ್ನು ನೀಡಿ ಆಮೇಲೆ ಅವನು ಓದುತ್ತಾ ಕುಳಿತಾಗ ಅವನ ವದನಾರವಿಂದದಲ್ಲಿ ಮಿಂಚಿ ಹಾದು ಹೋಗುವ ಸಮಸ್ತ ಭಾವನೆಗಳನ್ನು ತದೇಕ ಚಿತ್ತದಿಂದ ನೋಡುತ್ತಾ ಕಾತರದಿಂದ ಕೂರುವಂತೆ ನಾನು ಕಮಲೇಶ್ ಮುಂದೆ ಕುಳಿತೆ.

''ನೇರ ಗೆರೆಗಳಿರುವ ವಿಷಯಗಳ ಆಯ್ಕೆ ಅಷ್ಟೇನೂ ಸೂಕ್ತವಲ್ಲ ಅನ್ನಿಸುತ್ತದೆ'' ಎನ್ನುತ್ತಾ ಕಮಲೇಶ್ ನನ್ನ ಮೇರುಕೃತಿಗಳನ್ನು ಹಿಂತಿರುಗಿಸಿದರು. ಇದೇನೋ ಗಾದೆಯ ಮಾತಿನಂತಾಯಿತಲ್ಲಾ, ಚಿತ್ರ ಕಳಪೆ ಎನ್ನುವ ಬದಲು ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ವಿಷಯಾನೇ ಸರಿಯಿಲ್ಲಾ ಅನ್ನುತ್ತಾರಲ್ಲಾ ಎಂದುಕೊಳ್ಳುತ್ತಿದ್ದಂತೆ ಕಮಲೇಶ್ ಮುಂದುವರಿದು, ''ಮುಂದಿನ ತಿಂಗಳು, ಹಿರಿಯರಿಗಾಗಿಯೇ ಒಂದು ಕಲಾ ಕಾರ್ಯಾಗಾರವನ್ನು ಏರ್ಪಡಿಸಿದ್ದೇವೆ. ನೀವು ಏಕೆ ಅದಕ್ಕೆ ಸೇರಬಾರದು?'' ಎಂದು ಕೇಳಿದರು. ನಾನು ಸೇರಿದೆ.

ಕಾರ್ಯಾಗಾರದ ಉದ್ಘಾಟನೆಯನ್ನು ಮಾಡುತ್ತಾ ಶಿವಪ್ರಸಾದರು ''ನಾವುಗಳು ನಿಮ್ಮನ್ನೇನು ಎಂ.ಎಫ್. ಹುಸೇನ್, ಅಮೃತಾ ಷೇರ್‌ಗಿಲ್ ಆಗಿ ಬದಲಾಯಿಸೋದಕ್ಕೆ ಹೊರಟಿಲ್ಲ. ಚಿತ್ರರಚನೆ ಮಾಡುವುದಕ್ಕೆ ಇರಬೇಕಾದ ಮೂಲಭೂತ ಸಿದ್ಧತೆಗಳನ್ನು ತಿಳಿಸುವುದಷ್ಟೇ ನಮ್ಮ ಕೆಲಸ. ಮುಖ್ಯ ಸಿದ್ಧತೆಯೆಂದರೆ ಸಂವೇದನಾಶೀಲತೆ. ಒಂದು ಜಲವರ್ಣವನ್ನು ರಚಿಸುವ ಮುಂಚೆ ಆ ಕುರಿತ ವಸ್ತುವನ್ನು ನೋಡಿದರಷ್ಟೇ ಸಾಲದು. ನಿಮ್ಮ ಎಲ್ಲ ಇಂದ್ರಿಯಗಳಿಂದ ಅದನ್ನು ಅನುಭವಿಸಬೇಕು. ಒಂದು ಎಲೆಯನ್ನು ಪೇಂಟ್ ಮಾಡಬೇಕಾದರೆ ಮೊದಲಿಗೆ ಅದನ್ನು ನಿಮ್ಮ ಬೆರಳುಗಳಿಂದ ಸವರಿ ಅದರ ಹೊರ ಪದರದ ನುಣುಪು, ಒರಟು ಇವುಗಳನ್ನು ಗ್ರಹಿಸಿ. ಗಾಳಿ ಅದರ ಮೇಲೆ ಬೀಸುವಾಗ ಆಗುವ ಸುಂಯ್ ನಾದವನ್ನು ಕಿವಿಗೊಟ್ಟು ಆಲಿಸಿ. ಆಗ ನಿಮ್ಮ ಚಿತ್ರಕ್ಕೆ ಜೀವ ತುಂಬುತ್ತದೆ. ನಿಮ್ಮ ಎಮೋಷನ್ ಎಲೆಯ ವರ್ಣಗಳ ಮೂಲಕ ಚಿತ್ರದಿಂದ ಹೊರಹೊಮ್ಮುತ್ತದೆ....'' ಎಂದೆಲ್ಲಾ ಹೇಳಿದರು. ಇದನ್ನೆಲ್ಲಾ ಕೇಳಿಸಿಕೊಂಡಮೇಲೆ, ನನ್ನ ಹಲವು ಸಹಪಾಠಿಗಳು ''ಇದೆಲ್ಲಾ ನಮಗೆ ಗಿಟ್ಟುವ ಸರಕಲ್ಲ'' ಎಂದು ಗೊಣಗಿಕೊಂಡದ್ದೂ ನನ್ನ ಕಿವಿಗೆ ಬಿತ್ತು.


ನಮ್ಮ ಕಾರ್ಯಾಗಾರದ ಮುಖ್ಯ ಉಪನ್ಯಾಸಕಿ ಶ್ರೀಮತಿ ತಾರಕೇಶ್ವರಿ. ಇವರಿಗೆ ಸಹಾಯಕ ಉಪನ್ಯಾಸಕ ಶ್ರೀ ಬಾಬು. ತಾರಕೇಶ್ವರಿಯವರ ಪದಸಂಪತ್ತಿಯನ್ನು ಅನುಭವಿಸಿಯೇ ತಿಳಿಯಬೇಕು. ಕಾರ್ಯಾಗಾರದ ಮೊದಲ ದಿನಗಳಲ್ಲಿ ನಾನು ಬಹು ಉತ್ಸಾಹದಿಂದ ನನ್ನ ಕೃತಿಗಳನ್ನು ಅವರ ಮುಂದಿಟ್ಟೆ. ''ನೋಡಿದ್ರೇ ಗೊತ್ತಾಗತ್ತೆ. ನಿಮ್ದು ಎಲ್ ಬೋರ್ಡ್ ಕೇಸು'' ಅಂದರು ಆಕೆ. ಇನ್ನೊಮ್ಮೆ ಐಶ್ವರ್ಯ ರಾಯ್‌ಳ portrait ಅನ್ನು ಬಹು ಮುತುವರ್ಜಿಯಿಂದ ಪೇಂಟ್ ಮಾಡಿ ಟೀಚರ್‌ಗೆ ತೋರಿಸಿದೆ. ಒಂದು ನಿಮಿಷ ಆಕೆ ಏನೂ ಮಾತನಾಡಲಿಲ್ಲ. ಆಮೇಲೆ ''ಸತ್ತ ಬಿಳೀ ಜಿರಳೆ'' ಎಂದು ಹೇಳಿ ಮುಂದೆ ನಡೆದರು. ಸುತ್ತಲಿದ್ದವರೆಲ್ಲರೂ ಘೊಳ್ಳೆಂದು ನಕ್ಕರು. ನನ್ನ ಪಕ್ಕದಲ್ಲಿ ನಿಂತಿದ್ದ ಜೀಜು, (ಈಕೆಗೆ ಕನ್ನಡ ಸುತರಾಮ್ ಬರುಲ್ಲ) "What did she say?" ಅಂತ ಕುತೂಹಲದಿಂದ ಕೇಳಿದಳು. ನಾನು "she said that my Eishwarya Rai

resembles a dead white cochroach" ಅಂತ ಸ್ಪಷ್ಟವಾಗಿ ಹೇಳಿದೆ. ಜೀಜು ಜೊತೆಗೆ, ಮೀನು (ಪೂರ್ಣ ನಾಮಧೇಯ ಮೃಣಾಳಿಕಾ), ಸಂಗೀತಾ ಈ ಎಲ್ಲ ಕನ್ನಡ ಬಾರದ ತರುಣಿಯರೂ ಜೋರಾಗಿ ನಗುಕ್ಕೆ ಪ್ರಾರಂಭಿಸಿದರು. ನನ್ನ ಅದೃಷ್ಟ, ಆ ಸಮಯಕ್ಕೆ ಸರಿಯಾಗಿ ಬಾಬು ಅಲ್ಲಿಗೆ ಬಂದ. ''ಬಾಬು ಇದ್ಯಾರು ಹೇಳು ನೋಡೋಣ?'' ಅಂತ ಕೇಳಿದೆ. ಅವ ''ಐಶ್ವರ್ಯ ರಾಯ್'' ಎಂದ. ನನ್ನ ಹೃದಯ ತುಂಬಿಬಂತು.

ನಮ್ಮ ತರಗತಿಯ ಕಲಾ ವಿದ್ಯಾರ್ಥಿ, ವಿದ್ಯಾರ್ಥಿನಿಯರಲ್ಲಿ ಮುಕ್ಕಾಲು ಪಾಲು ಯುವತಿಯರು. ವಿದ್ಯಾರ್ಥಿ ಸಮೂಹದಲ್ಲಿ ಅರ್ಧದಷ್ಟು ತರುಣರು. ಎಲ್ಲರೂ ಹವ್ಯಾಸೀ ಕಲೆಗಾರರೇ. ಇದಕ್ಕೆ ಅಪವಾದವೆಂದರೆ ದೊಡ್ಡಬಳ್ಳಾಪುರದ ಚಂದ್ರು. ಈತ ಕಮರ್ಷಿಯಲ್ ಆರ್ಟಿಸ್ಟ್. ಕಲೆಗಾರಿಕೆಯ ಹೊಸತನ, ಸ್ಪಾಂಟೇನಿಯಟಿ ಇವುಗಳನ್ನು ಕಲಿಯಲು, ಅನುಭವಿಸಲು ಈತ ಕಾರ್ಯಾಗಾರ ಸೇರಿದ್ದ. ನಮ್ಮ ತರಗತಿಯ ಅತ್ಯಂತ ಕಿರಿಯ ವಿದ್ಯಾರ್ಥಿನಿಯೆಂದರೆ ಪೂರ್ಣಿಮಾ. ಈ ಹುಡುಗಿ ಕಿರುತೆರೆಯ ತಾರೆ. ''ಮಾಂಗಲ್ಯ'' ಎಂಬ ಹೆಸರಿನ ಸೀರಿಯಲ್‌ನಲ್ಲಿ ನಟಿಸುತ್ತಿದ್ದಾಳಂತೆ. ಮೊದಲ ಬಾರಿ ಇವಳನ್ನು ಭೇಟಿ ಮಾಡಿದಾಗ, ''ಏಕೆ, ಹಿಂದಿನ ಕ್ಲಾಸಿಗೆ ಬರಲಿಲ್ಲ?'' ಅಂತ ಕೇಳಿದೆ. ''ಷೂಟಿಂಗ್ ಇತ್ತು ಅಂಕಲ್'' ಎಂದಳು ಪೂರ್ಣಿಮಾ. "I hope nobody was hurt" ಅಂತ ಕ್ವಿಪ್ ಮಾಡಿದೆ.

ಮೊನ್ನೆ ನಮ್ಮ ಕ್ಲಾಸಿನಲ್ಲಿ watercolor demonstration ಇತ್ತು. ಶೇಖರ್ ಸಾರ್ ಬಂದು ನಮ್ಮ ಮುಂದೆಯೇ ಪ್ರಕೃತಿಯ ವೈವಿಧ್ಯಮಯ ವರ್ಣಗಳನ್ನು ಬಿಳಿಯ ಹಾಳೆಯ ಮೇಲೆ ಮೂಡಿಸುವ ಕಲೆಯನ್ನು ಬಹು ಚತುರತೆಯಿಂದ ತೋರಿಸಿದರು. ಚಿತ್ರರಚನೆಯ ನಂತರ ವಿವಿಧ ಚಿತ್ರಕಾರರ ಶೈಲಿಗಳ ಬಗ್ಗೆ ಮಾತು ಹೊರಳಿತು. ''ರವಿವರ್ಮ ಹೇಳಿ ಕೇಳಿ ಮಹಾರಾಜರು. ಸುಖದ ಸುಪ್ಪತ್ತಿಗೆಯಲ್ಲಿ ಬೆಳೆದವರು. ಹಾಗಾಗಿ ಅವರ ಚಿತ್ರಗಳಲ್ಲಿ ನೋವು ಆಕ್ರೋಶ ಅನುಕಂಪ ಇವುಗಳನ್ನು ಕಾಣಲಾಗದು. ಯಾವುದೇ ವರ್ಣ ಚಿತ್ರಕಾರ ತನ್ನ ಎಲ್ಲ ಭಾವನೆಗಳನ್ನೂ ಚಿತ್ರದಲ್ಲಿ ಹೊರತರಬೇಕು. ಈ ದೃಷ್ಟಿಯಿಂದ ಚಿತ್ರಕಾರನಿಗೆ ಅನುಭವಗಳ ಶ್ರೀಮಂತಿಕೆ ಅತಿ ಮುಖ್ಯ'' ಎಂದರು ಶೇಖರ್ ಸಾರ್. ಮುಂದಿನ ವಾರ ಟೆರ್ರಾಕೊಟ್ಟಾ ಹೇಳಿಕೊಡುತ್ತಾರಂತೆ. ಆಗಲೇ ''ಐವಾರು ಚೇಸಿನದಿ...'' ಗಾದೆ ನೆನಪಿಗೆ ಬರುತ್ತಿದೆ.

– ಶಿವಕುಮಾರ್



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಬಾಗೂರು ಚಂದ್ರು

ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕನ್ನಡದ ಒಂದು ಶ್ರೇಷ್ಠ ಸಾಹಿತ್ಯಕೃತಿ. ಲೇಖಕರು ಇದನ್ನು ಹಾಸ್ಯಪ್ರಸಂಗಗಳು ಎಂದು ಕರೆದಿದ್ದಾರೆ, ಇದರಲ್ಲಿ ತೀರಾ ಅಪರೂಪದ ಹಾಸ್ಯವಿದೆ ನಿಜ. ಆದರೆ ಕನಸಿನ ದಿನಗಳ ಮಹತ್ವ ಹಾಸ್ಯಕ್ಕಷ್ಟೇ ಸೀಮಿತವಾಗುವುದಿಲ್ಲ. ಇದರಲ್ಲಿ ಒಂದು ಉತ್ತಮ ಸಾಹಿತ್ಯಕೃತಿಯ ಎಲ್ಲಾ ಲಕ್ಷಣಗಳೂ ಇವೆ. ಜೊತೆಗೆ ಇದು ನಮ್ಮ ನಾಡಿನ ಐವತ್ತು ವರ್ಷಗಳ ಹಿಂದಿನ ಶಿಕ್ಷಣ ವ್ಯವಸ್ಥೆಯ ಮಹತ್ವದ ವಸ್ತುನಿಷ್ಠ ಸಾಮಾಜಿಕ ದಾಖಲೆಯೂ ಆಗಿದೆ.

ಕನಸಿನ ದಿನಗಳ ನಾಯಕ ಒಬ್ಬ ಶಾಲಾ ಇನ್ಸ್‌ಪೆಕ್ಟರ್. ಅವನಿಗೆ ಪ್ರಾಥಮಿಕ ಶಾಲಾ ಮೇಷ್ಟರುಗಳ ಬಗೆಗೆ ಅನುಕಂಪವಿದೆ. ಕಿತ್ತುತಿನ್ನುವ ಬಡತನದಲ್ಲೂ ಅವರು ತೋರಿಸುವ ವೃತ್ತಿನಿಷ್ಠೆಯ ಬಗೆಗೆ ಹೆಮ್ಮೆಯಿದೆ. ಇಂತಹ ಮೇಷ್ಟರುಗಳಿಗೆ ಸಹಾಯಮಾಡುವ ಬದಲು ಕಿರುಕುಳ ಕೊಡುವ ಅಧಿಕಾರಶಾಹಿಯ ಬಗೆಗೆ ಕೋಪವಿದೆ. ಗ್ರಾಮಾಂತರ ಪ್ರದೇಶಕ್ಕಾಗಿ ಸರ್ಕಾರ ಒದಗಿಸಿರುವ ಶಿಕ್ಷಣದ ಅವಕಾಶಗಳನ್ನು ಸರಿಯಾಗಿ ಬಳಸಿಕೊಳ್ಳದಿರುವ ಸ್ಥಳೀಯ ನಾಯಕತ್ವದ ಬಗೆಗೆ ವ್ಯಥೆಯಿದೆ.

ಸುದ್ದೇನಹಳ್ಳಿಯ ಕೆಂಚಪ್ಪ ಮೇಷ್ಟರು ಅಂದಿನ ಶಿಕ್ಷಕರ ಒಬ್ಬ ಪ್ರತಿನಿಧಿಯಾಗುತ್ತಾರೆ. ಇವರಿಗೆ ಸರ್ಕಾರದ ಹಣವನ್ನು ಸ್ವಂತಕ್ಕೆ ಬಳಸಬಾರದು ಎನ್ನುವ ನೈತಿಕ ಪ್ರಜ್ಞೆಯಿದೆ. ಶಾಲೆಯಲ್ಲಿ ಪಾಠಮಾಡುವಾಗ ರುಮಾಲು (ಪೇಟ) ಧರಿಸಿರಬೇಕು ಎನ್ನುವ ನಿಯಮವನ್ನು ಪಾಲಿಸುವ ಇಚ್ಛೆಯಿದೆ. ಆದರೆ ತಿಂಗಳಿಗೆ ಸಿಗುವ 15 ರೂಪಾಯಿ ಸಂಬಳದಲ್ಲಿ ಎರಡು ರೂಪಾಯಿಯ ರುಮಾಲನ್ನೂ ಕೊಳ್ಳಲು ಸಾಧ್ಯವಾಗದಂತಹ ಕಡು ಬಡತನ. ಮೇಷ್ಟರು ತಲೆಯ ಮೇಲಿದ್ದ ರುಮಾಲನ್ನು ತೆಗೆದು ಬೋರ್ಡು ಒರಸಿ ಮತ್ತೆ ಅದನ್ನೇ ತಲೆಯ ಮೇಲೆ ಸೊಟ್ಟಸೊಟ್ಟಾಗಿ ಇಟ್ಟುಕೊಳ್ಳುವ ಅಸಂಗತತೆ ಓದುತ್ತಿದ್ದಾಗ ನಗೆ ಬರಬಹುದು, ಆದರೆ ಮುಂದಿನ ಕ್ಷಣವೇ ಹೀಗೆ ನಕ್ಕಿದ್ದಕ್ಕೆ ನಾಚಿಕೆಯಾಗುತ್ತದೆ.

ಇಲ್ಲಿ ಹಾಸ್ಯದ ಉದ್ದೇಶ ಕೇವಲ ನಗಿಸುವುದಿಲ್ಲ, ಚಿಂತಿಸುವಂತೆ ಮಾಡುವುದು. ಐದು ದಶಕಗಳನಂತರವೂ ಇನ್ನೂ ಪ್ರಸ್ತುತವೆನ್ನಿಸುವ ಕನಸಿನ ದಿನಗಳಲ್ಲಿರುವುದು ಇಂತಹ ಹಾಸ್ಯ.

ಬೋರ್ಡು ಒರಸುವ ಬಟ್ಟೆ

- ಎಂ.ಆರ್. ಶ್ರೀನಿವಾಸಮೂರ್ತಿ

ಒಂದು ದಿನ ಬೆಳಗ್ಗೆ ರಂಗಣ್ಣ ಬೈಸ್ಕಲ್ ಮೇಲೆ ಪಾಠಶಾಲೆಗಳ ಭೇಟಿಗೆಂದು ಹೊರಟನು. ಏಳೆಂಟು ಮೈಲಿಗಳ ದೂರ ಹೊರಟು ಎರಡು ಮೂರು ಪಾಠಶಾಲೆಗಳನ್ನು ನೋಡಿಕೊಂಡು ಒಳಭಾಗದ ಹಳ್ಳಿಗಳಿಗೆ ಹೋಗುವ ಕಾಡರಸ್ತೆಯಲ್ಲಿ ತಿರುಗಿದನು. ಎರಡು ಮೈಲಿ ಹೋದಮೇಲೆ ಸುದ್ದೇನಹಳ್ಳಿ ಸಿಕ್ಕಿತು. ಪಾಠಶಾಲೆಯ ಹತ್ತಿರ ಹೋಗಿ ಇಳಿದಾಗ ಬಾಗಿಲು ತೆಗೆದಿತ್ತು. ಒಳಗೆ ಉಪಾಧ್ಯಾಯನೂ ಹುಡುಗರೂ ಇದ್ದರು. ಬಾಗಿಲ ಪಕ್ಕದಲ್ಲಿ ರಟ್ಟು ಕಾಗದದ ಮೇಲೆ 'ಪಾಠ ಕಾಲದಲ್ಲಿ ಗ್ರಾಮಸ್ಥರು ಯಾರೂ ಅಪ್ಪಣೆಯಿಲ್ಲದೆ ಒಳಕ್ಕೆ ಬರಕೂಡದು' ಎಂದು ನೋಟೀಸ್ ಹಾಕಿತ್ತು. ತನ್ನ ಸರ್ಕ್ಯುಲರ್ ಪ್ರಕಾರ ಮೇಷ್ಟ್ರು ಆ ನೋಟೀಸ್ ಹಾಕಿದ್ದುದರ ಬಗ್ಗೆ ರಂಗಣ್ಣನಿಗೆ ಸಂತೋಷವಾಯಿತು. ಬಾಗಿಲ ಬಳಿ ನಿಂತುಕೊಂಡು ನಗುತ್ತಾ, 'ಮೇಷ್ಟ್ರೇ, ನಾನು ಒಳಕ್ಕೆ ಬರಬಹುದೋ?' ಎಂದು ಕೇಳಿದನು. ಮೇಷ್ಟ್ರು ಸ್ವಲ್ಪ ಗಾಬರಿಯಾಗಿ, 'ಬರಬಹುದು ಸ್ವಾಮಿ! ತಮ್ಮ ಅಪ್ಪಣೆ ಪ್ರಕಾರ ಗ್ರಾಮಸ್ಥರ ತಿಳುವಳಿಕೆ ಬಗ್ಗೆ ಆ ಬೋರ್ಡನ್ನು ತಗಲು ಹಾಕಿದ್ದೇನೆ, ಅಷ್ಟೇ' ಎಂದನು. ಒಳಕ್ಕೆ ಪ್ರವೇಶಿಸಿದಾಗ ಮಕ್ಕಳು ಎದ್ದು ನಿಂತುಕೊಂಡು ಕೈಮುಗಿದರು. ಹಿಂದೆ ಕಿರುಚುತ್ತಿದ್ದಂತೆ 'ನಮಸ್ಕಾರಾ ಸಾರ್' ಎಂದು ಕಿರಿಚಲಿಲ್ಲ. ಅದನ್ನು ನೋಡಿ ರಂಗಣ್ಣನಿಗೆ ಸಂತೋಷವಾಯಿತು. ಮಕ್ಕಳಿಗೆ ಕೂತುಕೊಳ್ಳುವಂತೆ ಹೇಳಿದನು.

ಉಪಾಧ್ಯಾಯನಿಗೆ ಸುಮಾರು ನಲವತ್ತೈದು ವರ್ಷ. ಆದರೆ ಕೂದಲು ಆಗಲೇ ನರೆತಿತ್ತು. ಗಡ್ಡ ಉದ್ದವಾಗಿ ಬೆಳೆದಿರಲಿಲ್ಲ; ಆದರೆ ಕ್ಷೌರ ಮಾಡಿಸಿಕೊಂಡು ಮೂರು ತಿಂಗಳು ಆಗಿದ್ದಿರಬಹುದು ಎಂದು ತೋರುತ್ತಿತ್ತು. ಎಣ್ಣೆಗೆಂಪಿನ ಬಣ್ಣ; ಮಧ್ಯಸ್ಥವಾದ ಎತ್ತರ. ಅಂಗಿ ಎರಡು ಮೂರು ಕಡೆ ಹರಿದಿತ್ತು; ತಲೆಗೆ ಮಾಸಿದ್ದೊಂದು ರುಮಾಲು. ಮೇಷ್ಟ್ರ ಹೆಸರು ಕೆಂಚಪ್ಪ. ರಂಗಣ್ಣನು ಮೇಷ್ಟರನ್ನು ನೋಡಿ, 'ಮೂರನೆಯ ತರಗತಿಗೆ ಒಂದು ಲೆಕ್ಕ ಹಾಕಿ ಮೇಷ್ಟ್ರೇ' ಎಂದು ಹೇಳಿದನು. ಆ ಮೇಷ್ಟ್ರು ಕಪ್ಪು ಹಲಗೆಯ ಮೇಲೆ ಹತ್ತಿ ಹತ್ತದಂಥ ಸುಣ್ಣದಿಂದ, 378547896 x 5458945 ಎಂಬುದೊಂದು ಗುಣಾಕಾರದ ಲೆಕ್ಕವನ್ನು ಹಾಕಿದನು. 'ಮೇಷ್ಟ್ರೇ, ಅಷ್ಟು ದೊಡ್ಡ ಲೆಕ್ಕ ಬೇಡ, ಚಿಕ್ಕದೊಂದು ಲೆಕ್ಕಹಾಕಿ. ಮೂರು ಅಂಕಿಗಳಿಗಿಂತ ದೊಡ್ಡದು ಬೇಡ.'

'ಮಾಡ್ತಾರೆ ಸ್ವಾಮಿ! ಕಷ್ಟಪಟ್ಟು ಹೇಳಿಕೊಟ್ಟಿದ್ದೇನೆ. ಸ್ವಾಮಿಯವರು ತನ್ನ ಕಷ್ಟ ನೋಡಬೇಕು!'

'ಕಷ್ಟಪಟ್ಟು ಹೇಳಿಕೊಟ್ಟಿದ್ದೀರಿ ಮೇಷ್ಟ್ರೇ ಅಡ್ಡಿಯಿಲ್ಲ. ಆದರೆ ಅವರ ದರ್ಜೆಗೆ ಮೀರಿ ಲೆಕ್ಕ ಹಾಕಬಾರದು. ಪಾಠಗಳ ಪಟ್ಟಿಯಲ್ಲಿ ತಿಳಿಸಿರುವಂತೆ ಹೇಳಿಕೊಡಬೇಕು. ಪಾಠಗಳ ಪಟ್ಟಿ ಎಲ್ಲಿ? ತೆಗೆದುಕೊಡಿ.'



ಮೇಷ್ಟ್ರು ಪೆಟ್ಟಿಗೆಯಲ್ಲಿ ಹುಡುಕಿ ಹಳೆಯದೊಂದು ಪಟ್ಟಿಯನ್ನು ತೆಗೆದುಕೊಟ್ಟನು. ಅದರಲ್ಲಿ ಮುದ್ರಿಸಿರುವುದನ್ನು ತೋರಿಸಿ, 'ಇದನ್ನು ನೀವು ನೋಡಿಲ್ಲವೇ ಮೇಷ್ಟ್ರೇ?' ಎಂದು ರಂಗಣ್ಣ ಕೇಳಿದನು.

'ಇಲ್ಲ ಸ್ವಾಮಿ! ನಾನು ಬಡವ. ಆದರೆ ಸುಳ್ಳು ಹೇಳೋ ಮನುಷ್ಯನಲ್ಲ.'

'ಒಳ್ಳೆಯದು. ಮುಂದೆ ಇದರಲ್ಲಿರುವುದನ್ನೆಲ್ಲ ನೋಡಿಕೊಂಡು ಸರಿಯಾಗಿ ಪಾಠಮಾಡಿ ಮೇಷ್ಟ್ರೇ.'

'ಅಪ್ಪಣೆ ಸ್ವಾಮಿ'.

ರಂಗಣ್ಣನು ಓದುವ ಪಾಠ, ಪದ್ಯಪಾಠ ಮೊದಲಾದುವನ್ನು ಸ್ವಲ್ಪ ಪರೀಕ್ಷೆ ಮಾಡಿದ ನಂತರ ಮೇಷ್ಟ್ರೇ! ಉಕ್ತಲೇಖನ ಪಾಠವನ್ನು ಮೂರನೆಯ ತರಗತಿಗೆ ಸ್ವಲ್ಪ ಮಾಡಿ ನೋಡೋಣ ಎಂದನು. ಆ ಮೇಷ್ಟ್ರು ಓದುವ ಪುಸ್ತಕದಿಂದ ಒಂದು ಭಾಗದಿಂದ ತೆಗೆದು, 'ಹೇಳುವುದನ್ನು ಬರೆಯಿರಿ' ಎಂದು ತಿಳುವಳಿಕೆ ಕೊಟ್ಟು, 'ಒಂದು ಆಲದ ಮರದಲ್ಲಿ, ಒಂದು ಆಲದ ಮರದಲ್ಲಿ, ಆಯಿತೇ, ಒಂದು ಆಲದ ಮರದಲ್ಲಿ, ಒಂದು ಕಾಗೆ, ಒಂದು ಕಾಗೆ, ಒಂದು ಕಾಗೆ, ಗೂಡು ಕಟ್ಟಿಕೊಂಡು, ಗೂಡು ಕಟ್ಟಿಕೊಂಡು, ಗೂಡು ಕಟ್ಟಿಕೊಂಡು' ಎಂದು ಮುಂತಾಗಿ ಹೇಳುತ್ತಾ ಹುಡುಗರಿಂದ ಬರೆಯಿಸುತ್ತಿದ್ದನು. ರಂಗಣ್ಣ, 'ಮೇಷ್ಟ್ರೇ, ಸ್ವಲ್ಪ ನಿಲ್ಲಿಸಿ' ಎಂದು ಅವನನ್ನು ತಡೆದು ಬೋರ್ಡಿನ ಹತ್ತಿರ ತಾನೇ ಹೋಗಿ ನಿಂತುಕೊಂಡನು. 'ಬೋರ್ಡ್ ಒರಸುವ ಬಟ್ಟೆಕೊಡಿ ಮೇಷ್ಟ್ರೇ.'

'ಸ್ವಾಮಿ!'

'ಬಟ್ಟೆ ಎಲ್ಲಿ ಮೇಷ್ಟ್ರೇ?'

'ಸ್ವಾಮಿ! ಸ್ವಾಮಿ!' ಎಂದು ನಡುಗುತ್ತ ಆ ಮೇಷ್ಟ್ರು ತಲೆಗಿದ್ದ ರುಮಾಲನ್ನು ತೆಗೆದು ಬೋರ್ಡನ್ನು ಒರಸಿ ಆ ರುಮಾಲನ್ನು ಮೇಜಿನ ಮೇಲಿಟ್ಟುಬಿಟ್ಟನು! ರಂಗಣ್ಣನಿಗೆ, 'ನಾನೆಂಥ ಪಾಪ ಮಾಡಿದೆ ದೇವರೇ! ಬಡವನಾದ ಆ ಮೇಷ್ಟ್ರ ರುಮಾಲು ಹಾಳಾಯಿತಲ್ಲ' ಎಂದು ಬಹಳವಾಗಿ ಮನಸ್ಸು ಕರಗಿಹೋಯಿತು.

'ಅದೇಕೆ ಹಾಗೆ ಮಾಡಿದಿರಿ ಮೇಷ್ಟ್ರೇ? ಬೋರ್ಡು ಒರಸುವುದಕ್ಕೆ ಅಂಗೈಯಗಲ ಬಟ್ಟೆ ಇಟ್ಟುಕೊಳ್ಳಬಾರದೇ? ಸಾದಿಲ್ವಾರು ನಾಲ್ಕಾಣೆ ಇರುತ್ತದೆಯಲ್ಲ.'

'ಸಾದಿಲ್ವಾರು ಮೊಬಲಗು ಸಾಕಾಗುವುದಿಲ್ಲ ಸ್ವಾಮಿ!'

ರಂಗಣ್ಣನಿಗೂ ಅದೇ ಅಭಿಪ್ರಾಯವಾಗಿತ್ತು. ಒಂಟಿ ಉಪಾಧ್ಯಾಯರಿರುವ ಪಾಠಶಾಲೆಗಳಿಗೆ ತಿಂಗಳಿಗೆ ಎಂಟಾಣೆಯನ್ನಾದರೂ ಸಾದಿಲ್ವಾರಿಗೆ ಕೊಡಬೇಕು. ಅದರಂತೆ ಲೆಕ್ಕಮಾಡಿ ಹೆಚ್ಚು ಜನ ಉಪಾಧ್ಯಾಯರಿರುವ ಪಾಠಶಾಲೆಗಳಿಗೆ ಸಾದಿಲ್ವಾರು ಮೊಬಲಗನ್ನು ಹೆಚ್ಚಿಸಬೇಕು ಎಂಬುದು ಅವನ ತೀರ್ಮಾನವಾಗಿತ್ತು. ಆದ್ದರಿಂದ ಆ ವಿಚಾರದಲ್ಲಿ ಮೇಲಕ್ಕೆ ಪುನಃ ಶಿಫಾರಸು ಮಾಡಿ, ಒತ್ತಾಯ ಮಾಡಿ, ಅನುಕೂಲಪಡಿಸಬೇಕೆಂದು ನಿರ್ಧರಿಸಿದನು. ಬಳಿಕ ಬೋರ್ಡಿನ ಮೇಲೆ 'ಕೃಷ್ಣಸರ್ಪ', 'ಹುತ್ತ' ಎಂದು ಮಾತುಗಳನ್ನು ಬರೆಯತೊಡಗಿದಾಗ ಹಾಳು ಸೀಮೆಯ ಸುಣ್ಣ ಸರಿಯಾಗಿ ಬರೆಯದೇ ಹೋಯಿತು. 'ಒಳ್ಳೆಯ ಸೀಮೇಸುಣ್ಣ ಕೊಂಡುಕೊಳ್ಳಬೇಕು. ಮೇಷ್ಟ್ರೇ. ಇದೆಲ್ಲೋ ನಾಡು ಸುಣ್ಣ' ಎಂದು ಹೇಳಿದನು.

'ಅಪ್ಪಣೆ ಸ್ವಾಮಿ.'

ರಂಗಣ್ಣನು ಕಪ್ಪು ಹಲಗೆಯ ಮೇಲೆ ಕ್ಲಿಷ್ಟಪದಗಳನ್ನು ಬರೆದು ಮಕ್ಕಳಿಂದ ಅವುಗಳನ್ನು ಓದಿಸಿದನು. ಆಮೇಲೆ ಅವುಗಳನ್ನು ತಮ್ಮ ಕಪ್ಪು ಹಲಗೆಗಳಲ್ಲಿ ಮಕ್ಕಳು ಬರೆಯುವಂತೆ ಹೇಳಿದನು. ಹಾಗೆ ಬರೆದುದನ್ನು ನೋಡಿ ತಪ್ಪಿದ ಮಾತುಗಳನ್ನು ಬೋರ್ಡಿನ ಮೇಲಿರುವ ಮಾತುಗಳ ಸಹಾಯದಿಂದ ನೋಡಿ ಸರಿಪಡಿಸಿಕೊಳ್ಳುವಂತೆ ಹೇಳಿದನು. ಇದಾದ ಮೇಲೆ ಕಪ್ಪು ಹಲಗೆಗಳಲ್ಲಿ ಬರೆದಿರುವುದನ್ನೆಲ್ಲ ಅಳಿಸಿಬಿಡುವಂತೆ ಹೇಳಿ ತಾನು ಬೋರ್ಡನ್ನು ಒರಸಲು ತನ್ನ ಕರವಸ್ತ್ರಕ್ಕೆ ಕೈ ಹಾಕತೊಡಗಿದಾಗ ಮೇಷ್ಟ್ರು ಒಂದೇ ಬಾರಿಗೆ ಹಾರಿ ಮೇಜಿನ ಮೇಲಿದ್ದ ರುಮಾಲಿಂದ ಆ ಬೋರ್ಡನ್ನು ಒರಸಿಬಿಟ್ಟನು. 'ಅಯ್ಯೋ ಮೇಷ್ಟ್ರೇ! ಪುನಃ ರುಮಾಲನ್ನು ಹಾಳುಮಾಡಿಕೊಂಡಿರಲ್ಲಾ! ಈ ಕೈವಸ್ತ್ರದಿಂದ ನಾನು ಒರಸುತ್ತಿದ್ದೇನೆ. ಇದನ್ನೇ ನಿಮಗೆ ಕೊಟ್ಟುಬಿಟ್ಟು ಹೋಗುತ್ತೇನೆ. ಬೋರ್ಡು ಒರಸುವುದಕ್ಕೆ ಇಟ್ಟುಕೊಳ್ಳಿ.'

'ಸ್ವಾಮಿಯವರ ಸೇವಕ! ತಾಪೇದಾರ! ಬಡವ! ಆದರೆ ಸುಳ್ಳು ಹೇಳೋ ಮನುಷ್ಯ ಅಲ್ಲ. ಕಷ್ಟಪಟ್ಟು ಕೆಲಸ ಮಾಡಿದ್ದೇನೆ ಸ್ವಾಮಿ.'

ರಂಗಣ್ಣನು ಉಕ್ತಲೇಖನ ಪಾಠದ ಕ್ರಮವನ್ನು ಆ ಮೇಷ್ಟರಿಗೆ ಚೆನ್ನಾಗಿ ತಿಳಿಸಿಕೊಟ್ಟು, 'ಇನ್ನು ಮುಂದೆ ನಾನು ಹೇಳಿಕೊಟ್ಟ ಕ್ರಮದಲ್ಲಿ ಪಾಠಮಾಡಿ ಮೇಷ್ಟ್ರೇ! ತಪ್ಪುಗಳನ್ನು ಬರೆಯದಂತೆ ನಾವು ಮಕ್ಕಳಿಗೆ ಸಹಾಯ ಮಾಡಬೇಕು. ಸುಮ್ಮನೆ ಪರೀಕ್ಷೆಯಲ್ಲಿ ಹೇಳಿದಂತೆ ಉಕ್ತಲೇಖನ ಮಾಡಬಾರದು. ಈಗ ಮಕ್ಕಳನ್ನು ಆಟಕ್ಕೆ ಬಿಡಿ ಮೇಷ್ಟ್ರೇ' ಎಂದು ಹೇಳಿದನು. ಮಕ್ಕಳೆಲ್ಲ ಆಟಕ್ಕೆ ಹೊರಕ್ಕೆ ಹೋದರು. ರಂಗಣ್ಣನು ಸ್ಕೂಲಿನ ದಾಖಲೆಗಳನ್ನು ನೋಡಬೇಕೆಂದು ಬಯಸಿದಾಗ ಮೇಷ್ಟ್ರು ಎಲ್ಲ ರಿಜಿಸ್ಟರುಗಳನ್ನೂ ತೆಗೆದು ಮೇಜಿನ ಮೇಲಿಟ್ಟನು. ಅಡ್ಮಿಷನ್ ರಿಜಿಸ್ಟರು ಮತ್ತು ಹಾಜರಿ ರಿಜಿಸ್ಟರುಗಳನ್ನು ರಂಗಣ್ಣನು ನೋಡುತ್ತಿದ್ದಾಗ ಮೇಷ್ಟ್ರು ಒಂದು ದೊಡ್ಡ ಲೋಟದಲ್ಲಿ ಕಾಸಿದ ಹಾಲು ಒಂದಿಷ್ಟು ಸಕ್ಕರೆ ಆರೇಳು ಬಾಳೆಯ ಹಣ್ಣುಗಳು, ಹತ್ತು ಹನ್ನೆರಡು ಹಲಸಿನ ಹಣ್ಣಿನ ತೊಳೆಗಳು - ಇವುಗಳನ್ನು ಸರಬರಾಜು ಮಾಡಿಕೊಂಡು ಬಂದು ಮೇಜಿನ ಮೇಲೆ ತಂದಿಟ್ಟನು.

'ಸ್ವಾಮಿಯರು ತಗೋಬೇಕು. ಬಹಳ ದಣಿದು ಬಂದಿದ್ದೀರಿ. ತಮ್ಮ ಕಾಲದಲ್ಲಿ ಮೇಷ್ಟರಿಗೆಲ್ಲ ಒಳ್ಳೆಯ ತಿಳುವಳಿಕೆ ಕೊಡುತ್ತಿದ್ದೀರಿ ಸ್ವಾಮಿ! ನಮ್ಮನ್ನೆಲ್ಲ ಕಾಪಾಡಿಕೊಂಡು ಬರಬೇಕು ಸ್ವಾಮಿ! ನಾನು ಭಯಸ್ಥ; ಕಷ್ಟಪಟ್ಟು ಕೆಲಸ ಮಾಡಿಕೊಂಡು ಹೋಗುತ್ತಿದ್ದೇನೆ ಸ್ವಾಮಿ!' ಎಂದು ಉಪಾಧ್ಯಾಯನು ಹೇಳಿದನು. ರಂಗಣ್ಣನಿಗೆ ಈ ಹಾಲು ಹಣ್ಣುಗಳ ನಿವೇದನೆ ಅಭ್ಯಾಸವಾಗಿ ಹೋಗಿತ್ತು. ಯಥಾಶಕ್ತಿ ಅವುಗಳನ್ನು ಸ್ವೀಕರಿಸಿ ಮುಂದೆ ದಾಖಲೆಗಳನ್ನು ನೋಡುತ್ತಾ ಹೋದನು. ಮೇಷ್ಟರು ಬರೆದಿದ್ದ ಟಿಪ್ಪಣಿ, ಡೈರಿ, ಸಂಬಳದ ಬಟವಾಡೆ ರಿಜಿಸ್ಟರು, ಸ್ಟಾಕ್ ರಿಜಿಸ್ಟರು - ಎಲ್ಲವನ್ನೂ ನೋಡಿ ಆಯಿತು. ಸಾದಿಲ್ವಾರ್ ರಿಜಿಸ್ಟರು ಕಣ್ಣಿಗೆ ಬೀಳಲಿಲ್ಲ.

'ಮೇಷ್ಟ್ರೇ, ಸಾದಿಲ್ವಾರ್ ರಿಜಿಸ್ಟರ್ ಎಲ್ಲಿ?' ಎಂದು ಕೇಳಿದನು.

'ಅಲ್ಲೇ ಇದೆ ಸ್ವಾಮಿ. ಮೊದಲಿನ ರಿಜಿಸ್ಟರ್ ಹಿಂದೆಯೇ ಮುಗಿದೋಯ್ತು. ಆಫೀಸಿಗೆ ಯಾದಿ ಬರೆದೆ. ಸಪ್ಲೈ ಬರಲಿಲ್ಲ. ಒಂದು ನೋಟ್‌ಪುಸ್ತಕ ಕೊಂಡುಕೊಂಡು ಅದರಲ್ಲಿ ಬರೆದಿಟ್ಟಿದ್ದೇನೆ ಸ್ವಾಮಿ.'

ರಂಗಣ್ಣ ಕೆಳಗಿನ ದಾಖಲೆಗಳಲ್ಲಿ ಹುಡುಕಿದಾಗ ನಲವತ್ತು ಪುಟಗಳ ಒಂದು ನೋಟ್ ಪುಸ್ತಕ ಸಿಕ್ಕಿತು. ಮೇಲೆ 'ಸಾದಿಲ್ವಾರ್ ಖರ್ಚಿನ ಪುಸ್ತಕ' ಎಂದು ಬರೆದಿತ್ತು. ಮೊದಲನೆಯ ಹಾಳೆಯಲ್ಲಿ, ಮೇ ತಿಂಗಳ ಸಾದಿಲ್ವಾರು: ಜಮಾ - 4 ಆಣೆ; ಖರ್ಚು - ನೋಟ್‌ಬುಕ್ 1 ಆ, ಕಾಗದ 2 ಆ, ಮಸಿಮುಳ್ಳು 1 ಆ ಒಟ್ಟು 4 ಆ. ಬಾಕಿ ಇಲ್ಲ ಎಂದು ಬರೆದಿತ್ತು. ಮುಂದೆ ಕೆಲವು ತಿಂಗಳು ಜಮಾ - 4 ಆಣೆ; ಖರ್ಚು - ಇಲ್ಲ ಬರೆದು ಯಾವುದೋ ತಿಂಗಳ ಒಟ್ಟು ಜಮಾ ರೂ. 2; ಖರ್ಚು - ಬೋರ್ಡ್ ಒರಸುವ ಬಟ್ಟೆ ರೂ. 2, ಬಾಕಿ ಏನೂ ಇಲ್ಲ ಎಂದು ಬರೆದಿತ್ತು. ಮೇಷ್ಟ್ರು ರುಜುವಿತ್ತು. ರಂಗಣ್ಣ ಕಣ್ಣು ಕಣ್ಣು ಬಿಡುತ್ತಾ ಕುಳಿತುಕೊಂಡನು!

'ಮೇಷ್ಟ್ರೇ! ಇದೇನು? ಎಂಟು ತಿಂಗಳ ಸಾದಿಲ್ವಾರ್ ಮೊಬಲಗಿಗೆ ಬೋರ್ಡ್ ಒರಸುವ ಬಟ್ಟೆಯ ಖರ್ಚು ತೋರಿಸಿದ್ದೀರಿ. ನಿಮ್ಮ ಬೋರ್ಡ್ ಒರಸುವುದಕ್ಕೆ ಅಂಗೈಯಗಲ ಬಟ್ಟೆ ಕೂಡ ಇರಲಿಲ್ಲವಲ್ಲ?' ಎಂದು ಕೇಳಿದನು.

'ಇಗೋ ಸ್ವಾಮಿ ಬೋರ್ಡು ಒರಸುವ ಬಟ್ಟೆ! ಮೇಜಿನ ಮೇಲೆ ಆಗಿನಿಂದ ಇಟ್ಟಿದ್ದೇನೆ! ತಮ್ಮೆದುರಿಗೇನೇ ಬೋರ್ಡು ಒರಸಿದ್ದೇನೆ. ನಾನು ಬಡವ ಸ್ವಾಮಿ! ಆದರೆ ಸುಳ್ಳು ಲೆಕ್ಕ ಬರೆದಿಲ್ಲ; ಸುಳ್ಳು ಪಳ್ಳು ಹೇಳೋ ಮನುಷ್ಯ ಅಲ್ಲ.'

'ಮೇಷ್ಟ್ರೇ! ಇದು ನಿಮ್ಮ ರುಮಾಲಲ್ಲವೆ?'

'ಸ್ವಾಮಿ! ನಾನು ಬಡವ, ಭಯಸ್ಥ! ನೋಡಿ ಸ್ವಾಮಿ! ಅಂಗಿ ಎರಡು ಮೂರು ಕಡೆ ಹರಿದು ಹೋಗಿದೆ; ಈ ಪಂಚೆ ಜೂಲು ಜೂಲಾಗಿದೆ. ಸಂಬಳ ಹದಿನೈದೇ ರೂಪಾಯಿ. ಮನೆಯಲ್ಲಿ ನಾಲ್ಕು ಜನ ಮಕ್ಕಳು, ನನ್ನ ಹೆಂಡತಿ ಮತ್ತು ಅತ್ತೆ. ನಾನು ಸುಳ್ಳು ಹೇಳೋದಿಲ್ಲ, ಸ್ವಾಮಿ! ಮೇಜಿನ ಮೇಲಿರುವುದೇ ಬೋರ್ಡ್ ಒರಸುವ ಬಟ್ಟೆ. ದುಡ್ಡು ತಿಂದಿಲ್ಲ. ರಸೀತಿ ಮಡಗಿದ್ದೇನೆ! ತಲೆಗೆ ರುಮಾಲಿಲ್ಲದಿದ್ದರೆ ಜುಲ್ಮಾನೆ ಹಾಕುತ್ತೀರಿ. ಅದಕ್ಕೇನೆ ಅದನ್ನು ರುಮಾಲಾಗಿ ಹಾಕಿಕೊಂಡಿದ್ದೆ ಸ್ವಾಮಿ!'

'ಮತ್ತೆ ರುಮಾಲಿಲ್ಲದೆ ಈಗ ನಿಂತಿದ್ದೀರಲ್ಲ ನೀವು?'

'ಇಗೋ ಸ್ವಾಮಿ ಮಡಕ್ಕೋತೀನಿ! ಕಾಪಾಡಿಕೊಂಡು ಬರಬೇಕು!'

ಮೇಷ್ಟ್ರು ಭಯದಿಂದ ಆ ಧೂಳು ತುಂಬಿದ ರುಮಾಲನ್ನೇ ಸೊಟ್ಟ ಸೊಟ್ಟಾಗಿಟ್ಟುಕೊಂಡು ಕೈಮುಗಿದುಕೊಂಡು ನಿಂತನು. ರುಮಾಲಿನ ಒಂದು ಕೊನೆ ಸಡಲಿಹೋಗಿ ಭುಜದ ಮೇಲೆ ಇಳಿಬಿದ್ದದ್ದು ಕೂಡ ಆ ಮೇಷ್ಟ್ರಿಗೆ ಅರಿವಾಗಲಿಲ್ಲ. ಮೇಷ್ಟ್ರು ರುಮಾಲಿನಿಂದ ಬೋರ್ಡನ್ನು ಒರಸಿದ್ದರ ಅರ್ಥ ಆಗ ರಂಗಣ್ಣನಿಗೆ ಸ್ಫುರಿಸಿತು! ಅವನಿಗೆ ಕೋಪ ಬರಲಿಲ್ಲ. ಕಣ್ಣುಗಳು ಹನಿಗೂಡಿ ಮಂಜುಮಂಜಾದುವು. ಮುಖವನ್ನು ಎತ್ತದೆ, 'ಮೇಷ್ಟ್ರ ಬಡತನ ಯಾವಾಗ ಹೋದೀತೋ? ಯಾವಾಗ ಅವರಿಗೆ ಹೊಟ್ಟೆಗೆ ಬಟ್ಟೆಗೆ ಸಾಕಾಗುವಷ್ಟು ಸಂಬಳ ದೊರೆತೀತೋ? ಮೋಟಾರುಗಳಲ್ಲಿ ಜಬರ್ದಸ್ತಿನಿಂದ ಓಡಾಡುವ ಸೆಂಚುರಿ ಕ್ಲಬ್ಬಿನ ಲೋಲರಿಗೆ ದೇವರು ಯಾವಾಗ ಕರುಣೆ ತುಂಬುವನೋ? ದೇವರೇ ಈ ಬಡವರ ರಕ್ಷಣೆಗೆ ಬರಬೇಕು! - ಎಂದು ನೊಂದುಕೊಂಡು ಎರಡು ನಿಮಿಷ ಮೌನವಾಗಿದ್ದನು. ಬಳಿಕ,

'ಮೇಷ್ಟ್ರೇ!! ಸಾದಿಲ್ವಾರ್ ಮೊಬಲಗೆಲ್ಲ ಬೋರ್ಡು ಒರಸುವ ಬಟ್ಟೆಗೇ ಆಗಿಹೋಯಿತಲ್ಲಾ! ಬೋರ್ಡು ಮೇಲೆ ಬರೆಯೋ ಸೀಮೆ ಸುಣ್ಣದ ಖರ್ಚಿಗೆ ಏನು ಮಾಡುತ್ತೀರಿ?' ಎಂದು ಕೇಳಿದನು.

'ಅದನ್ನು ಕೊಂಡಿಕೊಂಡಿಲ್ಲ ಸ್ವಾಮಿ. ಆದ್ದರಿಂದ ಲೆಕ್ಕದಲ್ಲಿ ಬರೆದಿಲ್ಲ. ನಾನು ಸುಳ್ಳು ಲೆಕ್ಕ ಬರೆಯೋ ಮನುಷ್ಯ ಅಲ್ಲ ಸ್ವಾಮಿ!'

'ಮತ್ತೆ ಸೀಮೆಸುಣ್ಣ ನಿಮಗೆ ಹೇಗೆ ದೊರೆಯುತ್ತೆ?'

'ಈ ಹಳ್ಳೀಲಿ ದಾಸಯ್ಯಗಳು ಬಹಳ ಮಂದಿ ಇದ್ದಾರೆ ಸ್ವಾಮಿ! ದಪ್ಪ ದಪ್ಪ ನಾಮ ಹಾಕ್ತಾರೆ. ಸ್ಕೂಲಿಗೆ ಬರೋ ಮಕ್ಕಳು ಮನೆಯಿಂದ ನಾಮದ ತುಂಡುಗಳನ್ನು ತಂದು ಕೊಡ್ತಾರೆ ಸ್ವಾಮಿ! ಅದನ್ನೇ ಉಪಯೋಗಿಸುತ್ತ ಕಷ್ಟಪಟ್ಟು ಮಕ್ಕಳಿಗೆ ವಿದ್ಯೆ ಹೇಳಿ ಕೊಟ್ಟಿದ್ದೇನೆ. ನಾನು ಸುಳ್ಳುಪಳ್ಳು ಹೇಳೋ ಮನುಷ್ಯ ಅಲ್ಲ ಸ್ವಾಮಿ!'


'ಕಾಗದ, ಬರೆಯುವ ಮುಳ್ಳು, ಮಸಿ ಈಗ ನಿಮಗೆ ಬೇಕಾಗಿಲ್ಲವೋ?'

'ಬೇಕು ಸ್ವಾಮಿ! ಹಿಂದೆ ಕೊಂಡುಕೊಂಡು ನಾಜೂಕಾಗಿ ಉಪಯೋಗಿಸಿದೆ. ನಾಳೆ ತಿಂಗಳಿನ ಸಾದಿಲ್ವಾರ್ ಮೊಬಲಗಿನಲ್ಲಿ ಮತ್ತೆ ಕೊಂಡುಕೊಳ್ಳುತ್ತೇನೆ ಸ್ವಾಮಿ! ಕಾಪಾಡಿಕೊಂಡು ಬರಬೇಕು.'

'ಒಳ್ಳೆಯದು ಮೇಷ್ಟ್ರೇ! ಈ ಪುಸ್ತಕ ನನ್ನ ಹತ್ತಿರ ಇರಲಿ. ಮಧ್ಯಾಹ್ನಕ್ಕೆ ಆಫೀಸಿನ ಹತ್ತಿರ ಬನ್ನಿ' ಎಂದು ಹೇಳಿ ಭೇಟಿಯನ್ನು ಮುಗಿಸಿಕೊಂಡು ಆ ಸಾದಿಲ್ವಾರ್ ಪುಸ್ತಕವನ್ನು ಜೇಬಿನಲ್ಲಿಟ್ಟುಕೊಂಡು ರಂಗಣ್ಣ ಪಾಠಶಾಲೆಯಿಂದ ಹೊರಬಿದ್ದನು. ಮೇಷ್ಟ್ರು ಅಷ್ಟು ದೂರ ಹಿಂಬಾಲಿಸಿಕೊಂಡು ಬರುತ್ತ, 'ಪ್ರಮೋಷನ್ ಕೊಟ್ಟು ಕಾಪಾಡಿಕೊಂಡು ಬರಬೇಕು ಸ್ವಾಮಿ! ಕಷ್ಟಪಟ್ಟು ಕೆಲಸ ಮಾಡಿದ್ದೇನೆ. ಮಕ್ಕಳಿಗೆಲ್ಲ ಚೆನ್ನಾಗಿ ಪಾಠ ಹೇಳಿ ಕೊಟ್ಟಿದ್ದೇನೆ' ಎಂದನು.

'ಎಲ್ಲರನ್ನೂ ಕಾಪಾಡುವ ಭಗವಂತ ಮೇಲಿದ್ದಾನೆ ಮೇಷ್ಟ್ರೇ! ನೀವು ನಿಲ್ಲಿ' ಎಂದು ಹೇಳಿ ರಂಗಣ್ಣನು ಬೈಸ್ಕಲ್ ಹತ್ತಿದನು.

★★★



ಅಂತಃಕರಣ

– ಎಚ್. ಗೋಪಾಲಕೃಷ್ಣ

ವಿದ್ಯಾರಣ್ಯಪುರಕ್ಕೆ ಬಂದು ಸೇರಿಕೊಂಡ ಹೊಸತರಲ್ಲಿ ನಮ್ಮ ರಸ್ತೆಯಲ್ಲಿ ಬೀದಿ ನಾಯಿಗಳೇ ಇರಲಿಲ್ಲ. ಆಗ ಜನಸಾಂದ್ರತೆಯೂ ಅಷ್ಟಿರಲಿಲ್ಲ ಮತ್ತು ಜನ ಇದ್ದರೆ ತಾನೇ ನಾಯಿಗಳು? ಅವೂ ಇರಲಿಲ್ಲ. ಪುರ ಬೆಳೀತಾ ಬಂದ ಹಾಗೇ ಜನ ಸಾಂದ್ರತೆ ಹೆಚ್ಚಿತು, ಕಳ್ಳತನಗಳು ವೃದ್ಧಿಯಾದವು; ಆಗ ಕೆಲವರಿಗೆ ಮನೆಯಲ್ಲಿ ನಾಯಿ ಸಾಕುವ ಯೋಚನೆ ಸಹಾ ಬಂದಿತು. ಮನೆಗಳಲ್ಲಿ ನಾಯಿ ಸಾಕಾಟ ಶುರುವಾದ ಸ್ವಲ್ಪ ಸಮಯದಲ್ಲೇ ಬೀದಿ ನಾಯಿಗಳು ಹೆಚ್ಚಾದುವು.

ಬೀದಿ ನಾಯಿಗಳು ಹೆಚ್ಚಾದಾಗ ಕೆಲವು ನಾಯಿಗಳು ಮರಿಗಳನ್ನು ಹಾಕಿ ಹತ್ತಿರ ಬಂದವರನ್ನು ಅಟ್ಟಿಸಿಕೊಂಡು ಕಚ್ಚಲು ಬರುತ್ತಿತ್ತು. ಕೆಲವು ಸಲ ಕಚ್ಚೂ ಬಿಡುತ್ತಿತ್ತು. ನಾಯಿ ಕೈಲಿ ಕಚ್ಚಿಸಿಕೊಂಡವರಿಗೆ ಹೊಕ್ಕಳ ಸುತ್ತಾ ಹದಿನಾಲ್ಕು ಇಂಜೆಕ್ಷನ್ನು ತಗೊಳೋ ಹಿಂಸೆಯಾದರೆ ಅಟ್ಟಿಸಿಕೊಂಡು ಬಂದವರು ಏದುಸಿರು ಬಿಡುತ್ತಾ ಇಡೀ ವಿದ್ಯಾರಣ್ಯಪುರವನ್ನ ಶಪಿಸುತ್ತಿದ್ದರು.

ಈ ಸಮಯದಲ್ಲೇ ಒಂದು ಭಾನುವಾರ ಬೆಳಿಗ್ಗೆ ನಮ್ಮ ರಸ್ತೆಗೆ ಒಂದು ಕಾಲೇಜು ಓದುತ್ತಿದೆ ಎಂದು ಹೇಳಬಹುದಾದ ಹುಡುಗಿಯೊಂದು ಸ್ಪೋರ್ಟ್ಸ್ ಸೈಕಲ್ಲನ್ನು ಏರಿ ಬಂದಳು. ಸುತ್ತಾ ಮುತ್ತಾ ನೋಡಿದಳು. ರಸ್ತೆ ನಿರ್ಜನವಾಗಿದೆ ಅಂತ ಅರಿತಳು. ಸೈಕಲ್ಲಿಗೆ ನೇತು ಹಾಕಿದ್ದ ಪ್ಲಾಸ್ಟಿಕ್ ವೈರ್ ಬ್ಯಾಗನ್ನು ತೆಗೆದಳು. ರೂಮಿನ ಕಿಟಕಿಯಿಂದ ಹುಡುಗಿ ಏನು ಮಾಡ್ತಿದ್ದಾಳೆ ಅಂತ ನಾನು ನೋಡುತ್ತಾ ನಿಂತಿದ್ದೆ. ವೈರು ಬ್ಯಾಗನ್ನು ತೆಗೆದು ಪಕ್ಕದ ಖಾಲಿ ಸೈಟಿನಲ್ಲಿ ಕುಕ್ಕರುಗಾಲಿನಲ್ಲಿ ಕುಳಿತಳು ಮತ್ತು ಬ್ಯಾಗನ್ನು ತೆರೆದು ಅದರಲ್ಲಿದ್ದ ನಾಲ್ಕು ನಾಯಿಮರಿಗಳನ್ನ ಬಿಟ್ಟು ಒಂದೇ ಕ್ಷಣದಲ್ಲಿ ಸೈಕಲ್ಲು ಏರಿ ಓಡಿಬಿಟ್ಟಳು!

ಬಾಗಿಲು ತೆಗೆದು ಆಚೆ ಹೋಗಿ ಇಲ್ಲಿ ನಾಯಿಗಳನ್ನು ಬಿಡಬಾರದು ಎಂದು ಹೇಳುವಷ್ಟರಲ್ಲಿ ಅವಳು ಮಂಗಮಾಯವಾಗಿಬಿಟ್ಟಳು. ಹೀಗೆ ನಾಲ್ಕು ಪುಟ್ಟ ನಾಯಿಮರಿಗಳು ನಮ್ಮ ರಸ್ತೇಗೆ ಬಂದು ಸೇರಿಕೊಂಡವು. ನಾಯಿಮರಿಗಳು ದುಂಡು ದುಂಡಗೆ ಇದ್ದದ್ದರಿಂದ ಅವುಗಳ ಆಟವನ್ನು ನೋಡುತ್ತಾ ನಿಲ್ಲುವುದು ನಮಗೆ ಒಂದೆರಡು ವಾರದಲ್ಲೇ ಅಭ್ಯಾಸವಾಯಿತು, ಮನೆಯಲ್ಲಿ ಮಿಕ್ಕಿದ್ದು ಪಕ್ಕಿದ್ದು ಅವಕ್ಕೆ ಆಹಾರವೂ ಆಯಿತು. ನಾಲ್ಕು ಮರಿಗಳಲ್ಲಿ ಮೂರು ದುಂಡಗಿದ್ದರೆ ಒಂದು ಪೀಚು. ರಸ್ತೆಯಲ್ಲಿ ಓಡಾಡುತ್ತಿದ್ದ ಗಾರೆ ಕೆಲಸದವರು, ಹಳೇ ಪೇಪರು ಮಾರುವವರು ಈ ನಾಯಿ ಮರಿಗಳ ಆಟ ನೋಡುತ್ತಾ ನಿಲ್ಲುವರು. ಮೂರು ನಾಯಿ ಮರಿಗಳನ್ನ ಇವರಲ್ಲೇ ಯಾರೋ ತಗೊಂಡು ಹೋಗಿಬಿಟ್ಟರು, ಬೀದಿ ನಾಯಿಗಳ ಮೇಲೆ ನಮ್ಮದೇನೂ


ಅಧಿಕಾರವಿಲ್ಲವಾದ್ದರಿಂದ ನಾವೂ ತೆಪ್ಪಗಿದ್ದೆವು. ಪೀಚಲು ಮರಿಯನ್ನು ಯಾರೂ ಒಯ್ಯದೇ ಅದು ನಮ್ಮ ರಸ್ತೆಯಲ್ಲೇ ಬೆಳೆಯಿತು.

ನೋಡನೋಡುತ್ತಿದ್ದ ಹಾಗೆಯೇ ಅದು ಗರ್ಭಿಣಿಯೂ ಆಯಿತು - ನಾಲ್ಕೋ ಐದೋ ಮರೀನೂ ಹಾಕಿತು, ಚರಿತ್ರೆ ಪುನರಾವರ್ತನೆಯಾಗಿ ಒಂದೇ ಒಂದು ಅದರ ಮಗು ನಮ್ಮ ರಸ್ತೇಲೇ ಉಳಿದುಕೊಂಡಿತು. ಕೆಲವು ದಿವಸದಲ್ಲೇ ಈ ನಾಯಿ ಯಾಕೋ ಕಾಲು ಎಳೆದುಕೊಂಡು ಓಡಾಡೋದು, ಇದ್ದಕ್ಕಿದ್ದ ಹಾಗೇ ಕುಂಯೋ ಅಂತ ನರಳುತ್ತಾ ಮಲಗಿ ನರಳೋದೂ ನಡೀತು. ನಮ್ಮ ಎದುರು ಮನೆಯ ಮಾಲಿ (ಇದು ಅವನ ಪೆಟ್ ಹೆಸರು - ಇಂಜಿನೀರಿಂಗ್ ಓದಿ ಸ್ವಂತ ಉದ್ದಿಮೆ ನಡೆಸುತ್ತಾ ಇದ್ದಾನೆ) ಒಬ್ಬ ಪ್ರಾಣಿ ಪ್ರೇಮಿ. ಪಾಪ ಇದಕ್ಕೆ ಅದೇನಾಗಿದೆಯೋ ಅಂತ ರಸ್ತೆ ಕೊನೆಯ ಮತ್ತೊಬ್ಬ ಹುಡುಗನ ಸಂಗಡ ಈ ನಾಯಿಮರೀನ ಹೆಬ್ಬಾಳದ ಪಶು ವೈದ್ಯ ಶಾಲೆಗೆ ಬುಟ್ಟಿಯಲ್ಲಿ ಇರುಕಿಸಿಕೊಂಡು ಅವನ ಮೋಟರ್ ಸೈಕಲ್ಲಿನಲ್ಲಿ ಕರೆದುಕೊಂಡು ಹೋಗಿ ತೋರಿಸಿದ. ವೈದ್ಯರು ಅದನ್ನ ಪರೀಕ್ಷಿಸಿ, ಅದಕ್ಕೆ ಒಂದು ರೀತಿಯ ಪೋಲಿಯೋ ಬಂದಿದೆ - ಜೀವಮಾನ ಪೂರ್ತಿ ಇದು ಹಾಗೇ ಕಾಲೆಳೆದುಕೊಂಡೇ ಓಡಾಡಬೇಕು ಅಂತ ಹೇಳಿದರು. ನಮ್ಮ ರಸ್ತೆಯಲ್ಲಿ ಈ ವಿಷಯ ತಿಳಿದಾಗ ಒಂದು ರೀತಿ ಮನಸಿನಲ್ಲೇ ದುಃಖ ಪಟ್ಟವರು ನಮ್ಮ ರಸ್ತೆಯ ಹೆಂಗಳೆಯರು ಮತ್ತು ಹೆಣ್ಣು ಹೃದಯ ಹೊತ್ತವರು. ಅವತ್ತಿನಿಂದ ಈ ಮರಿ ಮೇಲೆ ನಮಗೆ ಒಂದು ರೀತಿಯ ಅನುಕಂಪ ಶುರುವಾಯಿತು. ಅದನ್ನ ಯಾರಾದರೂ ಕೀಟಲೆ ಮಾಡಿ ಕಲ್ಲುಗಿಲ್ಲು ಎಸೆದರೆ ಅವರಿಗೆ ಬೈದು ಬುದ್ಧಿ ಹೇಳುವುದೂ ನಡೀತು. ನಾಯಿಮರಿ ಪಾಪ ಈಗ ಕಾಲು ಎಳೆದುಕೊಂಡು ಓಡಾಡುವುದರ ಜತೆಗೆ ಮಲಗಿದಾಗಲೆಲ್ಲಾ ಮೈಯನ್ನ ಒಂದು ರೀತಿ ವಿಚಿತ್ರವಾಗಿ ನಡುಗಿಸೋದು ಮತ್ತು ಕೆಲವು ಸಲ ನೋವಿನ ಬಾಧೆಗೋ ಏನೋ ವಿಚಿತ್ರವಾಗಿ ನರಳೋದು, ನಿಂತ ಕಡೆ ನಿಲ್ಲಕ್ಕೆ ಆಗದೇ ಒದ್ದಾಡೋದು. ಇದು ಪುಟ್ಟದಾಗಿದ್ದಾಗ ತೆಳ್ಳಗಿತ್ತು ಅಂತ ಅದಕ್ಕೆ ಐಶ್ವರ್ಯ ಅಂತ ನಾನೇ ನಾಮಕರಣ ಬೇರೇ ಮಾಡಿದ್ದೆ. ಈ ರೀತಿ ನಾಮಕರಣ ಮಾಡಿದ್ದು ಬೇರೆ ನನಗೆ ಕುಟುಕೋದು. ಬೀದಿ ನಾಯಿಗಳಿಗೆ ಈ ರೀತಿಯ ಖಾಯಿಲೆ ಏತಕ್ಕೆ ಬರಬೇಕು ಅಂತ ಕೆಲವು ಸಲ ಜಿಜ್ಞಾಸೆ ಬೇರೆ ಮನಸ್ಸಿನಲ್ಲಿ ಹುಟ್ಟುತ್ತಿತ್ತು. ಇಷ್ಟೆಲ್ಲಾ ಕಷ್ಟ ಪಡುತ್ತಿದ್ದರೂ ಅದು ಸಾಯಲಿ ಅಂತ ನಮಗ್ಯಾರಿಗೂ ಅನಿಸಿರಲಿಲ್ಲ. ಆಗಾಗ ತಾಯಿ ನಾಯಿ - ಇದೂ ನಮ್ಮ ರಸ್ತೇಲೇ ಒಂದಾಗಿಬಿಟ್ಟಿತ್ತು - ದೂರ ನಿಂತು ಮರಿಯ ಕಷ್ಟ ನೋಡಿ ಪೆಚ್ಚುಮುಖ ಹಾಕಿಕೊಂಡು ಸಂಕಟ ಪಡುತ್ತಿತ್ತು. ಅಯ್ಯೋ ನಾಯೀಪಾಡೇ ಅಂತ ಯಾರಿಗಾದರೂ ಅನಿಸಲೇಬೇಕು.

ಮೊನ್ನೆ ನಾಯಿಗಳಲ್ಲೂ ಇರುವ ಒಂದು ಸಜ್ಜನಿಕೆ - ಇದನ್ನ ಸಜ್ಜನಿಕೆ ಅನ್ನಬೇಕೋ ಅಥವಾ ಬೇರೆ ಮತ್ತೆ ಯಾವ ಪದ ಹಾಕಬೇಕೋ ನನಗೆ ತಿಳೀದು - ಕಂಡು ಆಶ್ಚರ್ಯ ಪಟ್ಟುಬಿಟ್ಟೆ, ರಾತ್ರಿ ಮಿಕ್ಕಿದ ಅನ್ನವನ್ನು ಮನೆ ಮುಂದಿರುವ ಚಪ್ಪಡಿ ಕಲ್ಲಿಗೆ ಸುರಿದು ಅದನ್ನ ನಾಯಿ ತಿಂದುಕೊಂಡು ಹೋಗಲಿ ಅಂತ ಬಿಡೋದನ್ನ ಒಂದು ರೂಢಿ

ಮಾಡಿಕೊಂಡಿದಾಳೆ ನನ್ನಾಕೆ. ರಾತ್ರಿ ಹನ್ನೊಂದರ ಸುಮಾರಿಗೆ ಗೇಟಿನ ಬೀಗ ಜಡಿದು ಮುಂಬಾಗಿಲು ಹಾಕುವ ಮುನ್ನ ಈ ಕೆಲಸ ನಡೀತದೆ. ರಾತ್ರಿ ಹನ್ನೊಂದಕ್ಕೆ ಅನ್ನ ಮೊಸರು ಕಲಿಸಿ ಮುಂದಿನ ಕಲ್ಲುಚಪ್ಪಡಿ ಮೇಲೆ ಸುರಿಯಲು ಹೆಂಡತಿ ಆಚೆ ಹೊರಟಾಗ ನಾನೂ ಹಿಂಬಾಲಿಸಿದೆ. ಚಪ್ಪಡಿ ಮೇಲೆ ಮೊಸರನ್ನ ಸುರಿದಾಯಿತು. ಲೊಚ್ ಲೊಚ್ ಲೊಚ್ ಅಂತ ನಾಯಿಯನ್ನೂ ಕರೆದಳು. ರಸ್ತೆಯ ಆ ತುದಿಯಿಂದ ಎರಡು ನಾಯಿಗಳು ಬಂದವು - ಮೊದಲು ತಾಯಿ ನಾಯಿ, ಅದರ ಹಿಂದೆ ಮರಿ-ಅದೇ ಪೋಲಿಯೋ ರೋಗದ್ದು. ತಾಯಿ ನಾಯಿ ಬಂದು ಮೊದಲು ಅನ್ನದ ಹತ್ತಿರ ನಿಂತಿತು. ಮರಿ ಬರುವವರೆಗೆ ಕಾದು ಮರಿ ಅನ್ನಕ್ಕೆ ಬಾಯಿ ಹಾಕಿದ ನಂತರ ತುಸುದೂರ ನಿಂತು ಮರಿ ತಿನ್ನುವುದನ್ನು ನೋಡುತ್ತಾ ನಿಂತಿತು!

ಪ್ರತಿ ದಿವಸ ಇದು ಹೀಗೇ ಮಾಡುತ್ತೇರೀ ಮರಿ ತಿನ್ನಲಿ ಅಂತ ಕಾದಿರುತ್ತೆ... ಅಂತ ನನ್ನಾಕೆ ಹೇಳಿದಳು. ಪ್ರಾಣಿಗಳ ಬಗ್ಗೆ ಸಾಕಷ್ಟು ಕೇಳಿದ್ದೆ, ಓದಿದ್ದೆ ಆದರೆ ಇಂಥಹ ಅಂತಃಕರಣ ಮನುಷ್ಯರಲ್ಲೂ ಕಾಣದ ಇಂಥಹ ಅಂತಃಕರಣ ಅವುಗಳಲ್ಲೂ ಇರುತ್ತೆ ಅಂತ ಮೊದಲನೇ ಬಾರಿ ಅರಿವಾಯಿತು.



ಸಾಕಪ್ಪಾ ಸಾಕೂ....

– ಗುರು

ಈಟೀವಿ ಖಾಸಗಿ ದೂರದರ್ಶನದಲ್ಲಿ ಹಾಸ್ಯ ಧಾರಾವಾಹಿಗಳು ಪ್ರತಿದಿವಸವೂ ಬಿತ್ತರಗೊಳ್ಳುತ್ತಿದೆ. ಸಂಜೆ ಪ್ರಸಾರವಾದ ಧಾರಾವಾಹಿಗಳು ಎಷ್ಟೋ ತಿಂಗಳುಗಳ ನಂತರ ಮಧ್ಯಾಹ್ನಕ್ಕೆ ಮರುಪ್ರಸಾರಗೊಳ್ಳುತ್ತವೆ. ಅಂದರೆ ಸಂಜೆ ಏಳರ ನಂತರ ಪ್ರಸಾರವಾಗುವ ಧಾರಾವಾಹಿ ಮಧ್ಯಾಹ್ನದ ಸಮಯವನ್ನು ಮೇನೇಜಿಸುತ್ತದೆ! ಇದು ಸುಮಾರು ಎಲ್ಲಾ ಚಾನಲ್ಲುಗಳೂ ಲಾಗಾಯ್ತಿನಿಂದ ಅನುಸರಿಸಿಕೊಂಡು ಬಂದಿರುವ ವಿಧಾನ. ಇದರಿಂದ ಎರಡು ಅನುಕೂಲಗಳಿವೆ - ಖಾಸಗಿ ಚಾನಲ್ಲುಗಳು ಸಮಯ ಹೊಂದಿಸಿಕೊಂಡು ವೆಚ್ಚ ಉಳಿಸುವುದು ಒಂದು ಮತ್ತು ಮಿಸ್ ಆದ ಧಾರಾವಾಹಿಗಳನ್ನು ವೀಕ್ಷಕ ಮತ್ತೆ ನೋಡಲು ಅವಕಾಶ ಕಲ್ಪಿಸುವುದು.


ಖಾಸಗಿ ಚಾನಲ್‌ಗಳಲ್ಲಿ ಪೈಪೋಟಿಯಲ್ಲಿ ಹಾಸ್ಯ ಧಾರಾವಾಹಿಗಳು ಕನ್ನಡಿಗರ ಮೇಲೆ ಸೇಡು ತೀರಿಸಿಕೊಳ್ಳುತ್ತಿವೆ. ಈ ರೀತಿಯ ಸೇಡು ತೀರಿಸಿಕೊಳ್ಳುತ್ತಿರುವ ಧಾರಾವಾಹಿಗಳಲ್ಲಿ ಮುಂಚೂಣಿಯಲ್ಲಿರುವ ಧಾರಾವಾಹಿ ಎಂದರೆ ಈಟೀವಿಯಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ಪ್ರತಿರಾತ್ರಿ ಎಂಟಕ್ಕೆ ಪ್ರಸಾರವಾಗುವ ಸಿಲ್ಲಿ ಲಲ್ಲಿ ಎಂಬ ಕಥಾನಕ! ಹಾಸ್ಯ ಧಾರಾವಾಹಿ ಎಂದರೆ ಕಥೆಗೆ ತರ್ಕ ಪರ್ಕ ಇವೆಲ್ಲಾ ಇರಬೇಕು ಎಂದು ಬಹುಶಃ ಯಾರೂ ಅಂದುಕೊಳ್ಳತಕ್ಕದ್ದಲ್ಲ ಎಂಬ ಧಾಟಿಯಲ್ಲೇ ಇದರ ಒಂದೊಂದು ಕತೆಯನ್ನೂ ಹೆಣೆಯಲಾಗುತ್ತದೆ. ಕತೆಯ ಕಂಟಿನ್ಯೂಯಿಟಿ ಇದಕ್ಕೆ ಇಲ್ಲ. ಬದಲಿಗೆ ನೀವು ಒಂದು ವರ್ಷ ಬಿಟ್ಟು ಇದನ್ನು ನೋಡಿದರೂ ನಿಮಗೆ ಕತಾ ಲಿಂಕುಗಳ ಗೋಜೇ ಇಲ್ಲದೇ ಎಪಿಸೋಡನ್ನು ವೀಕ್ಷಿಸಬಹುದು! ಅಂದರೆ ಪ್ರತಿ ಕಂತೂ ಹೊಸಹೊಸದು. ಈ ಕಾರಣದಿಂದಾಗಿಯೇ ಧಾರಾವಾಹಿ ತನ್ನ ಬಿಗಿ ಕಳೆದುಕೊಂಡು ಸಪ್ಪೆಯಾಗತೊಡಗಿದೆ ಎನಿಸುತ್ತದೆ. ಅಲ್ಲದೇ ಯಾವುದೇ ಹಾಸ್ಯ ಧಾರಾವಾಹಿ ತನ್ನ ಬಿಗಿ ಉಳಿಸಿಕೊಂಡು ಮುಂದುವರೆಯಬೇಕಿದ್ದಲ್ಲಿ ಅದಕ್ಕೆ ಒಂದು ಚೌಕಟ್ಟಿನ ಮಿತಿ ಇರಬಾರದು. ಆದರೆ ಇಲ್ಲಿ ಅದೇ ಪಾತ್ರಗಳು ಅದೇ ಚೌಕಟ್ಟು ಮತ್ತು ಅದೇ ರೀತಿಯ ಕಥಾ ಹಂದರವಿರುವುದು ಧಾರಾವಾಹಿ ತನ್ನ ಆಕರ್ಷಣೆಯನ್ನು ಉಳಿಸಿಕೊಳ್ಳುವಲ್ಲಿ ವಿಫಲವಾಗಿದೆ.

ಈಚೀಚೆಗೆ ಈ ಸಮಯದಲ್ಲಿ ಬೇರೆ ಯಾವುದಾದರೂ ತಮಿಳು ಚಾನಲ್ಲನ್ನು ನೋಡಬೇಕೆನಿಸುತ್ತದೆ ಎಂದು ಪರೋಕ್ಷವಾಗಿ ಇದರ ವೀಕ್ಷಕರೊಬ್ಬರು ತಮ್ಮ

ಅಭಿಪ್ರಾಯ ತಿಳಿಸಿದರು! ಹಾಸ್ಯ ಪ್ರಧಾನ ಧಾರಾವಾಹಿಗಳ ಇತಿ ಮಿತಿಯನ್ನು ಕುರಿತು ಸಂಶೋಧನೆ ನಡೆಸುವವರಿಗೆ ಈ ಧಾರಾವಾಹಿ ಅತ್ಯಂತ ವಿಪುಲವಾದ ಸಾಮಗ್ರಿಯನ್ನು ಒದಗಿಸಬಲ್ಲುದು. ಈ ಎಲ್ಲ ವೀಕ್ ಪಾಯಿಂಟುಗಳಿದ್ದರೂ ಇದನ್ನು ನಿಲ್ಲಿಸದೇ ಓಡಿಸುತ್ತಿರುವುದು ಒಂದು ಹೆಚ್ಚಿನ ಸಂಗತಿ; ಮತ್ತೊಂದು ಹೆಚ್ಚಿನದ್ದು ಎಂದರೆ ಅದೇ ಲೇಖಕರು ಹಠ ತೊಟ್ಟು ಬೆನ್ನು ಬಿಡದ ವಿಕ್ರಮ ಮಹಾರಾಜನ ಬೇತಾಳದ ಹಾಗೆ ಇದಕ್ಕೆ ಕತೆ ಹೊಸೆಯುತ್ತಲೇ ಇರುವುದು. ಲೇಖಕರ ಬಗ್ಗೆ ಮೆಚ್ಚುಗೆ ಮೂಡುತ್ತದೆ. ಅವರ ಬಗ್ಗೆ ಅಯ್ಯೋ ಪಾಪ ಅಂತಲೂ ಅನಿಸುತ್ತದೆ!

ಸಾಕಪ್ಪಾ ಸಾಕೂ ಅನ್ನುವವರೆಗೆ ಇದು ಹೀಗೇ ಮುಂದುವರೆಯುವ ಎಲ್ಲ ಸೂಚನೆಗಳೂ ಈ ಸದ್ಯಕ್ಕೆ ಗೋಚರಿಸುತ್ತಿದೆ! ಬರೋದೇ ಕೆಲವೇ ಕೆಲವು ಹಾಸ್ಯ ಆಧಾರಿತ ಧಾರಾವಾಹಿಗಳು - ಅದರಿಂದ ಇಂಥಹವನ್ನು ಕುರಿತು ಬರೆಯಬೇಕಾದರೆ ಕೊಂಚ ಲಿಬರಲ್ಲಾಗಿ, ಕೊಂಚ ಸಾಫ್ಟ್ ಕಾರ್ನರ್ ಸೇರಿಸಿ ನೋವಾಗದ ಹಾಗೆ ವಿಮರ್ಶೆ ಇರಬೇಕು ಎಂದು ನನ್ನ ಆಪ್ತರೊಬ್ಬರು ಕಿವಿಯಲ್ಲಿ ಹೇಳುತ್ತಿದ್ದಾರೆ! ಆದ್ದರಿಂದ...

★★★



(ಬಾಲ್ಯದಲ್ಲಿ ಕೇಳಿದ್ದು- ನಿರೂಪಣೆ: ಚಂಬಾ)

ವಿದ್ಯಮಾನಗಳು

– ಕು.ಶ.

ಇಂದಿನ ಸಂದರ್ಭಕ್ಕೆ ಚೂರು ಬದಲಾಯಿಸಿದ ಹಿಂದೆ ಜನಪ್ರಿಯವಾಗಿದ್ದ ಒಂದು ನಂಬಿಕೆ: ಇನ್ನೂ 25 ವರ್ಷ ತುಂಬಿಲ್ಲದಾಗ ನಕ್ಸಲೀಯರ ಪರವಾಗಿಲ್ಲದಿದ್ದವನಿಗೆ ಹೃದಯವಿಲ್ಲ, 25 ವರ್ಷ ದಾಟಿದಮೇಲೂ ಇನ್ನೂ ನಕ್ಸಲೀಯರ ಪರವಾಗಿಯೇ ಇರುವವನಿಗೆ ಮೆದುಳಿಲ್ಲ. ಈ ಲೆಕ್ಕದಲ್ಲಿ ನಮ್ಮ ಬುದ್ಧಿಜೀವಿಗಳ mental age ಮಾನಸಿಕ ವಯಸ್ಸು ಎಷ್ಟು?

ಏಕೇ ಈ ಪ್ರಶ್ನೆ ಎಂದು ಕೇಳಿದಿರಾ? ಈಚೆಗೆ ಮೆಣಸಿನಹಾಡ್ಯದಲ್ಲಿ ಸಾಕೇತ ರಾಜನ್ ಗುಂಡಿಗೆ ಬಲಿಯಾದಾಗ ಅಯ್ಯೋಪಾಪ ಎಂದು ಕೊಡಕೊಡ ಕಣ್ಣೀರು ಸುರುಸಿದ ಈ ಮಂದಿಯೇ ಮುಂದೆ ಮೂರೇ ದಿನಗಳಲ್ಲಿ ವೆಂಕಟಮ್ಮನಹಳ್ಳಿಯಲ್ಲಿ ಪೊಲೀಸರು ಹತ್ಯೆಗೀಡಾದಾಗ ಈ ಪಾಪಿಗಳಿಗೆ ತಕ್ಕ ಶಾಸ್ತಿಯಾಗಲೇ ಬೇಕು ಎಂದು ಆರ್ಭಟಿಸುತ್ತಿರುವುದನ್ನು ನೋಡಿದ ಮೇಲೆ ನಮ್ಮ ಬುದ್ಧಿಜೀವಿಗಳು 25 ವರ್ಷ ದಾಟಿದ್ದಾರೆಯೇ ಇಲ್ಲವೆ ಎನ್ನುವ ಈ ಅನುಮಾನ.

★★★

ರಾಜಕಾರಣಿಗಳ ಹೆಸರಿಗೆ, ಅವರ ಉತ್ತರದಾಯಿತ್ವಕ್ಕೆ ಕಾಳಗಗಳಾಗುವುದು ಹೊಸದಲ್ಲ. ಹಿಂದೆ ಇಂದಿರಾ ವಾರಸುದಾರಿಕೆಗೆ ಇಬ್ಬರು ಸೊಸೆಯರ ನಡುವೆ ವ್ಯಾಜ್ಯವಾಯಿತು, ಎಂಜಿಆರ್ ಉತ್ತರದಾಯಿತ್ವಕ್ಕೆ ಜಾನಕಿ ಜಯಲಲಿತಾರ ನಡುವೆ ಕೇಶಾಕೇಶಿಯಾಯಿತು. ಈಗಂತೂ ಯಾರಾದರೂ ಎಂಪಿ, ಎಂಎಲ್ಎ ಸತ್ತಾಗ ಸತ್ತವನ ಹೆಣದ ಮುಂದೆಯೇ ಉತ್ತರದಾಯಿತ್ವಕ್ಕೆ (ತೆರವಾದ ಕುರ್ಚಿಗೆ) ಯುದ್ಧಗಳಾಗುತ್ತಿವೆ.

ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲಾ. ರಾಜಕಾರಣದ ಈ ಚಾಳಿ ಈಗ ಸಾಹಿತ್ಯಕ್ಕೂ ಬಂದಂತಿದೆ. ನಮ್ಮ ಕನ್ನಡದ ಒಬ್ಬ ಪ್ರಮುಖ ಕವಿ (ಕತೆಗಾರ ಟ್ಯಾಬ್ಲಾಯ್ಡ್ ಪತ್ರಕರ್ತ ಇಟಿಸಿ ಇಟಿಸಿ) ಹೆಸರಿಗಾಗಿ ಆತನ ಮಕ್ಕಳ ಕಲಹ ಬೀದಿಗೆ ಬಂದಿದೆ. ಇದನ್ನು ನೋಡಿದ ಕನ್ನಡ ತಾಯಿಗೆ ತನಗೆ ನುಡಿಕಾಣಿಕೆಯನ್ನು ಅರ್ಪಿಸುತ್ತಿದ್ದ ತನ್ನ ಒಬ್ಬ ಮಗನ ಹೆಸರು ಇಷ್ಟು ಮುಖ್ಯವಾಯಿತಲ್ಲ ಎಂದು ಸಂತೋಷಿಸಬೇಕೇ ಅಥವ ತನ್ನ ಮೊಮ್ಮಕ್ಕಳೂ ರಾಜಕಾರಣಿಗಳ ಮಟ್ಟಕ್ಕೆ ಇಳಿಯುತ್ತಿದ್ದಾರಲ್ಲ ಎಂದು ದುಃಖಿಸಬೇಕೇ ತಿಳಿಯದಾಗಿದೆಯಂತೆ.

★★★

ಲಾಲು ಪ್ರಸಾದ್ ಚುನಾವಣೆಯಲ್ಲಿ ಸೋತಿದ್ದಾರೆ. ರಾಬ್ರಿ ಹೆಸರಿನಲ್ಲಿನ ಲಾಲು ಆಡಳಿತವನ್ನು ಬಿಹಾರದ ಜನತೆ ಖಡಾಖಂಡಿತವಾಗಿ ತಿರಸ್ಕರಿಸಿದೆ. ನಮಗೆಲ್ಲಾ ಆಗಾಗ

ಪುಗಸಟ್ಟೆ ಮನರಂಜನೆ ಒದಗಿಸುತ್ತಿದ್ದ, ಬೇಕಾಗಿಯೇ ಸಕಲಿಶಾಮನ ವೇಷ ಧರಿಸಿ ಇತರ ರಾಜಕಾರಣಿಗಳನ್ನು ಮೂರ್ಖರನ್ನಾಗಿ ಮಾಡುತ್ತಿದ್ದ ಅತ್ಯಂತ ವರ್ಣರಂಜಿತ ವ್ಯಕ್ತಿಗೆ - ಲಾಲು ನಿಮ್ಮನ್ನು ಮಿಸ್ ಮಾಡುತ್ತೇವೆ ಎಂದು ಹೇಳಬೇಕೆನ್ನಿಸಿತು.

ಲಾಲು ಸೋತಿದ್ದಾರೆ ನಿಜ. ಆದರೆ ಅದು ಯಾವುದು ಅಯ್ಯೋ ತೊಲಗಿತಲ್ಲ ಎಂದು ಬಾಗಿಲು ಕಿಟಕಿಗಳನ್ನು ಮುಚ್ಚಿ ನಿಟ್ಟುಸಿರು ಬಿಡುತ್ತಿರುವಾಗಲೇ ಇಲ್ಲ ಬಂದೆ ಗವಾಕ್ಷಿಲೀ ಎಂದು ಪ್ರತ್ಯಕ್ಷವಾಗುತ್ತಿತ್ತಂತೆ. ನಮ್ಮ ರಾಜಕಾರಣದಲ್ಲಿ ನೇರ ಬಾಗಿಲುಗಳಿಗಿಂತ ಗವಾಕ್ಷಿಗಳೇ ಜಾಸ್ತಿ. ಈ ಗವಾಕ್ಷಿಗೆ ಹತ್ತಲು ಏಣಿಹಾಕಿಕೊಡುವ ಈ ಏಣಿಯಿಂದ ಜಾರಿ ಬೀಳದಂತೆ ಹಿಡಿದುಕೊಳ್ಳುವ constitutional authorities' ಇದ್ದಾರೆ. ಲಾಲು ದಯವಿಟ್ಟು ನಿಮ್ಮನ್ನು ಮಿಸ್ ಮಾಡಲು ಅವಕಾಶಕೊಡಿ ಎಂದು ಬೇಡಿಕೊಳ್ಳೋಣವೆನಿಸುತ್ತಿದೆ.

★★★

ಹತ್ತಿಪ್ಪತ್ತು ವರ್ಷಗಳ ಹಿಂದಿನ ಜೋಕು: ಪ್ರಶ್ನೆ- ಕೇಂದ್ರ ಹಣಕಾಸು ಮಂತ್ರಿಗಳು ಬಜೆಟ್ ಏಕೆ ಮಂಡಿಸುತ್ತಾರೆ? ಉತ್ತರ- ನಾನಿ ಪಾಲ್ಕಿವಾಲ ಆದರ ಮೇಲೆ ಭಾಷಣಮಾಡಲಿ ಎಂದು. ಆಗ ಮಂತ್ರಿ ಮಹೋದಯರ ವಾಕ್ಚಾತುರ್ಯಕ್ಕಿಂತ ತಜ್ಞರ ವಿಶ್ಲೇಷಣೆಗೆ ಹೆಚ್ಚಿನ ಮಹತ್ವವಿತ್ತು. ಟೀವಿ ಬಂದಮೇಲೆ ಪರಿಸ್ಥಿತಿ ಬದಲಾಗಿದೆ. ಈಗಿನ ಎಲ್ಲಾ ಹಣಕಾಸು ಮಂತ್ರಿಗಳಿಗೆ ಟೀವಿ ಚಾನಲ್‌ಗಳಿಂದ ಶಹಬ್ಬಾಸ್ ಪಡೆಯುವ ತವಕ. ಪ್ರಾಡಕ್ಟ್‌ಗಿಂತ ಪ್ಯಾಕೇಜ್ ಮುಖ್ಯವಾಗಿರುವ ಈ ದಿನಗಳಲ್ಲಿ ಕಾನ್ವೆಂಟ್ ಇಂಗ್ಲೀಷ್ ಚೆನ್ನಾಗಿ ಬಲ್ಲವರಿಗೆ ಇಂತಹ ಪ್ರಶಂಸೆ ಸುಲಭವಾಗಿ ಸಿಗುತ್ತದೆ.

ಈ ವರ್ಷದ ಬಜೆಟ್ ಭಾಷಣ ಕೇಳಿದಿರಾ? ವಿತ್ತ ಮಂತ್ರಿಗಳು ಎಷ್ಟು ಬಾರಿ ನಾನು ನನ್ನ ಪದಗಳನ್ನು ಬಳಸಿದರು ಗಮನಿಸಿದಿರಾ? ಭಾಷಣದ ತುಂಬಾ ಆರೋಗ್ಯ, ಉದ್ಯೋಗ, ಕೃಷಿ, ಕೈಗಾರಿಕೆ, ಬ್ಯಾಂಕ್, ವಿಮೆ ಎಲ್ಲದರ ಸೂತ್ರದಾರ ನಾನು, ನನ್ನ ವಿನಾ ತೃಣಮಪಿ ನ ಚಲತಿ ಎನ್ನುವ ಧ್ವನಿ. ಮನಮೋಹನ್‌ಸಿಂಗ್, ಸೋನಿಯಾ ಇವರಲ್ಲಿ ನಮ್ಮ ನಿಜವಾದ ಪ್ರಧಾನ ಮಂತ್ರಿ ಯಾರು ಎನ್ನುವುದು ಇನ್ನೂ ಪ್ರಶ್ನೆಯಾಗಿಯೇ ಉಳಿದಿದೆ. ಆದರೆ ಫೆಬ್ರವರಿ 28ರಂದು ಮಾತ್ರ ಈ ಪ್ರಶ್ನೆಗೆ ಅಲ್ಪವಿರಾಮ. ಅಂದು ವಿತ್ತಮಂತ್ರಿಯೇ ಸರ್ವಜ್ಞ, ಸರ್ವಶಕ್ತ, ಎಲ್ಲಾ ಚಾನಲ್ಲುಗಳಲ್ಲಿಯೂ ಕಾಣಿಸಿಕೊಳ್ಳುವ ಈತ ಸರ್ವಾಂತರ್ಯಾಮಿ ಎಂದು ಹೇಳಲೇಬೇಕಾಗಿಲ್ಲ.

ಇಂತಹ ಹಮ್ಮು ಬಿಮ್ಮುಗಳ ಪಳನಿಯಪ್ಪನ್ ಚಿದಂಬರಂ ಕೂಡ ಕಲೈಗ್ನರ್ ಅಥವಾ ಪುರಟ್ಚಿಸೆಲ್ವಿಯ ಆಶೀರ್ವಾದ ಇಲ್ಲದಿದ್ದಾಗ ತಮ್ಮೂರಿನಲ್ಲಿಯೇ ಚುನಾವಣೆಯಲ್ಲಿ ಗೆಲ್ಲಲಾರರು. ಪ್ರಜಾಪ್ರಭುತ್ವಂ ವಾಳ್ಗೆ.

★★★

ತುಂತುರು

- ಆನಂದ

★ ಅನ್ನ ಸೀದು ಹೋಗಿ, ಪಲಾವ್ ಕುಲಗೆಟ್ಟು ಹೋದಾಗ ಪ್ರಮಾದವಶಾತ್/ ಕಣ್ತಪ್ಪಿನಿಂದ ಹೀಗಾಯಿತು ಎಂದು ಅತಿಥಿಗಳಿಗೆ ಹೇಳಿ ಬಚಾವಾಗುವಂತಿದ್ದರೆ......!!!

★ ನಾನು ಅಧಿಕಾರಕ್ಕಾಗಿ ಆಸೆ ಪಡುವವನಲ್ಲ: ಎಸ್ ಬಂಗಾರಪ್ಪ

★ ವನ್ಯ ಜೀವಿ ಮತ್ತು ಜನಗಳ ಮಧ್ಯೆ ಆಯ್ಕೆ ಮಾಡಿಕೊಳ್ಳಬೇಕಾದ ಸಮಯ ಬಂದಾಗ ನನಗೆ ಆಯ್ಕೆಯ ಪ್ರಶ್ನೆಯೆ ಬಾರದು ಎಂದು ರಾಜಸ್ತಾನದ ಮುಖ್ಯ ಮಂತ್ರಿ ಹೇಳಿದ್ದಾರೆ. ನಿಜವೇ. ಏಕೆಂದರೆ ಹುಲಿಗಳು ಮತ ಚಲಾಯಿಸುವದಿಲ್ಲ.

★ ವಾದದ ಮೂಲಕ ಸತ್ಯವನ್ನು ಬಹಿರಂಗಪಡಿಸಬೇಕೇ ಹೊರತು ಸೃಷ್ಟಿಸಬಾರದು.

★ ತೆಲಗಿ ಖರೀದಿಸಿದ ಆಸ್ತಿಯನ್ನಷ್ಟೇ ಹರಾಜು ಮಾಡಲಾಗುತ್ತಿದೆ. ಖರೀದಿಸಿದ ರಾಜಕಾರಣಿಗಳನ್ನಲ್ಲ.

★ ಬೆಳಕು ಸಾಲದು ಅಥವಾ ಕತ್ತಲೆ ಎಂಬ ಕಾರಣ ನೀಡಿ ರದ್ದು ಪಡಿಸಲಾಗದಂತಹ ಕ್ರೀಡೆ ಪ್ರಣಯ.

★ ಮಂಗಳ ಗ್ರಹದಲ್ಲಿ ಜೀವ? ಭೂಮಿಯ ಮೇಲೆ ಜೀವವಿದೆಯಲ್ಲ ಎಂದು ಸಂಭ್ರಮಿಸಬೇಕಾಗಿದೆ!

★ ನಕ್ಸಲವಾದ ಎಂಬುದು ದಡಾರ, ಮಂಗನಬಾವು (ಮಂಪ್ಸ್) ಅಥವಾ ಪ್ರೇಮದಂತೆ. ಒಂದು ವಯಸ್ಸಿನಲ್ಲಿ ಅದು ಕೆಲವರಿಗೆ ಅಡರುತ್ತದೆ. ನಂತರ ಹಾಗೇ ಅದು ಬಿಟ್ಟು ಹೋಗುತ್ತದೆ.

★ ಒಂದು ಫ್ರೆಂಚ್ ಕಿಸ್ ಕೊಟ್ಟಾಗ 40,000 ಪರಾವಲಂಬಿಗಳು, 250 ಬಗೆಯ ಸೂಕ್ಷ್ಮಾಣುಗಳು, 0.7 ಗ್ರಾಂ ಪ್ರೊಟೀನ್, 0.45 ಗ್ರಾಂ ಕೊಬ್ಬು, 0.19 ಗ್ರಾಂ ಇತರ ಜೈವಿಕ ಪದಾರ್ಥಗಳು ವಿನಿಮಯವಾಗುತ್ತವೆ.

★ ಅವನು: ನಾನು ಎಳೆಯುವ ಲಕ್ಷ್ಮಣ ರೇಖೆಯನ್ನು ನನ್ನ ಹೆಂಡತಿ ದಾಟುವುದೇ ಇಲ್ಲ.

ಇವನು: ಅದು ಹೇಗೆ ಸಾಧ್ಯವಾಗುತ್ತದೆ?

ಅವನು: ಅವಳಿಗೆ ಬೇಕಾದ ಹಾಗೆ ನಾನು ರೇಖೆಯನ್ನು ಎಳೆಯುತ್ತೇನೆ.

★ ಆರ್.ಕೆ. ಲಕ್ಷ್ಮಣ್ ದಶಕಗಳಿಂದ ಸರ್ಕಾರಗಳನ್ನು, ಸರಾಜಕಾರಣಿಗಳನ್ನು ಲೇವಡಿ ಮಾಡುತ್ತಲೇ ಬಂದಿದ್ದಾರೆ. ಆದರೂ ಸರ್ಕಾರ ಅವರಿಗೆ ಪದ್ಮ ಪ್ರಶಸ್ತಿ ಕೊಟ್ಟು ಗೌರವಿಸುತ್ತಿರುವದರಿಂದ ಸರ್ಕಾರಕ್ಕೇ ಹೆಚ್ಚು ಹಾಸ್ಯ ಪ್ರಜ್ಞೆ ಇರುವಂತೆ ಕಾಣುತ್ತದೆ

★ ಭಾರತ ಬಡ ದೇಶವಲ್ಲ. ಆದರೆ ಮಹತ್ವ ಸಂಖ್ಯೆಯಷ್ಟು ಜನ ಬಡವರು.

ಕಡುಬು

– ಚಾಂಬಾ

ಒಂದಾನೊಂದು ಕಾಲ, ಒಂದಾನೊಂದು ಹಳ್ಳಿ, ಅಲ್ಲಿ ಗಂಗಮ್ಮ ಹೆಸರಿನ ಒಬ್ಬಳು ಬಡ ಮುದುಕಿ. ಕ್ಷಮಿಸಿ ಇದು ಗೋಳಿನ ಕತೆಯಲ್ಲ ತಮಾಷೆ ಕತೆ. ಹೀಗೆ ಷುರುಮಾಡಿದ್ದು ತಪ್ಪಾಯಿತು. ಹೇಗಿದ್ದರೂ ಒಂದಾನೊಂದು ಕಾಲ ಇನ್ನೊಂದು ಚೂರು ಹಿಂದಕ್ಕೆ ಹೋಗೋಣ. ಒಂದಾನೊಂದು ಹಳ್ಳಿ ಅಲ್ಲೊಬ್ಬಳು ಸುಂದರ ಯುವತಿ. ಅವಳ ಹೆಸರು ಗಂಗಿ. ಅವಳನ್ನು ಒಬ್ಬ ಸುಂದರ ಯುವಕ ಪ್ರೀತಿಸಿ ಮದುವೆಯಾದ. ಅವರಿಗೆ ಹುಟ್ಟಿದ ಮಗು ಕಲ್ಲೇಶ- ಎಲ್ಲರ ಪ್ರೀತಿಯ ಕಲ್ಲ.

ಪಾಪ ಕಲ್ಲ ಇನ್ನೂ ಚಿಕ್ಕವನಿದ್ದಾಗಲೇ ಅವನಪ್ಪ ಸತ್ತು ಹೋದ. ಅಮ್ಮ ಒಬ್ಬಳೇ ಕೂಲಿನಾಲಿ ಮಾಡಿ ಕಲ್ಲನನ್ನು ಬೆಳೆಸಿದಳು. ನಮ್ಮ ಕತೆ ಪ್ರಾರಂಭವಾದಾಗ ಗಂಗಮ್ಮನಿಗೆ ಅಂತಹ ವಯಸ್ಸು ಆಗಿತ್ತೋ ಇಲ್ಲವೋ ಆದರೆ ಮುದುಕಿ ಹಾಗೆ ಕಾಣಿಸುತ್ತಿದ್ದಳು. ಸರಿ, ಎಳೇ ಕರೂನೂ ಒಂದು ದಿನ ಎತ್ತಾಗಬೇಕಲ್ಲ. ಹಾಗೆ ಕಲ್ಲನೂ ಬೆಳೆದು ತರುಣನಾದ.

ಆ ಕಡೆ ಇನ್ನೊಂದು ಊರು. ಅಲ್ಲಿ ಒಬ್ಬಳು ಹುಡುಗಿ, ಹೆಸರು ಮಲ್ಲಮ್ಮ- ಎಲ್ಲರಿಗೂ ಮಲ್ಲಿ. ಅವಳಿಗೆ ಮದುವೆ ವಯಸ್ಸಾಯಿತು. ಅಪ್ಪ ಅಮ್ಮ ಗಂಡು ಹುಡುಕುತ್ತಿದ್ದರು. ಯಾರೋ ಈ ಹಳ್ಳೀಲಿ ಕಟ್ಟುಮಸ್ತಾದ ಗಂಡಿದೆ ಬೇಕಾದ್ರೆ ನೋಡ್ರಿ ಎಂದರಂತೆ. ಮಾತುಕತೆ ಆಯಿತು. ಕಲ್ಲೇಶ-ಮಲ್ಲಮ್ಮ ಗಂಡಹೆಂಡತಿ ಆದರು.

ಹೀಗಿರುತ್ತಿರಲಾಗಿ ಮಲ್ಲಿಯ ಊರದೇವರ ಜಾತ್ರೆ ಬಂತು. ಹೊಸ ಮದುಮಕ್ಕಳು ಮಲ್ಲಿ ತೌರು ಮನೆಗೆ ಹೋದರು. ಮಗಳು-ಅಳಿಯ ಮೊದಲ ಸಲ ಬಂದಿದಾರೆ. ಮಲ್ಲಿ ಅಮ್ಮನಿಗೆ ಸಂಭ್ರಮ. ಮನೇಲಿ ದಿನಾ ಸೀಊಟ. ಮೊದಲ ದಿನ ಪಾಯಿಸ ಅತ್ತೆ ಬಲವಂತ. ಕಲ್ಲ ಖುಷಿಯಾಗಿ ಊಟಮಾಡಿದ. ಎರಡನೆಯ ದಿನ ಜಾತ್ರೇಲಿ ಸುತ್ತಿ ಸುಸ್ತಾಗಿ ಬರುವ ಹೊತ್ತಿಗೆ ಹುಗ್ಗಿ ಮಾಡಿದ್ದರು, ಮೇಲೆ ಹೆತ್ತುಪ್ಪ.

ಮೂರನೆಯ ದಿನ ಜಾತ್ರೆ ಮುಗಿಸಿಕೊಂಡು ತಮ್ಮ ಹಳ್ಳಿಗೆ ವಾಪಸ್ ಹೊರಡೋ ದಿನ. ಅವತ್ತು ಕಡುಬು. ಎಂತಾ ಕಡುಬಪ್ಪ ಅಂದರೆ ಕರಿದಾಗ ಭುರ್ ಅಂತಾ ಅಷ್ಟು ದಪ್ಪ ಊದುಕೊಳ್ಳುತ್ತಲ್ಲಾ ಆ ಕಡುಬು. ಕಲ್ಲ ಇಂತಾ ಕಡುಬು ಅವನ ಜೀವನದಲ್ಲಿಯೇ ಎಂದೂ ತಿಂದಿರಲಿಲ್ಲ. ಅದೇಕೆ ಅದರ ಹೆಸರೂ ಕೇಳಿರಲಿಲ್ಲ. ಕಡುಬು ಅವನಿಗೆ ತುಂಬಾ ಇಷ್ಟವಾಯಿತು. ಇದರ ಹೆಸರು ಮರೀಬಾರದು ಎಂದು ಊರಿಗೆ ಬರುವಾಗ ದಾರೀಲೆಲ್ಲಾ ಕಡುಬು-ಕಡುಬು ಎಂದು ಮನಸಿನೊಳಗೇ ಹೇಳಿಕೊಳ್ತಾನೇ ಬಂದ.

ಕಲ್ಲ-ಮಲ್ಲಿ ತಮ್ಮ ಊರಿಗೆ ಬಂದರು. ಇನ್ನೇನು ಅದೇ ಕೆಲಸ ಅದೇ ಊಟ. ಆಗ ಒಂದಿನ ಕಲ್ಲನಿಗೆ ತಾನು ಅತ್ತೆಮನೇಲಿ ತಿಂದ ಆ ತಿಂಡಿ ತಿನ್ನಬೇಕು ಅಂತ ತುಂಬಾ ಆಸೆ

ಆಯಿತು. ಆದರೆ ಹಾಳಾದ್ದು ಅದರ ಹೆಸರೇ ಮರೆತುಹೋಗಿದೆ. ಎರಡು ದಿನ ಗ್ಯಾಪಿಸಿಕೊಳುಕೆ ಹೋಗ್ತಾನೆ ಕಬುಡು, ಬುಡುಗಿ, ಗಬುಡು ಅಂತ ಏನೇನೋ ಬರೋದು ಆದರೆ ಕಡುಬು ಮಾತ್ರ ನೆನಪಿಗೇ ಬರುವಲ್ಲದು. ಅದನ್ನು ತಿನ್ನಲೇಬೇಕು ಅಂತ ಮಹಾ ಆಸೆ.

ಕಲ್ಲ ತನ್ನ ಹೆಂಡತಿ ಎದುರು ತನ್ನ ಅಜ್ಞಾನ ತೋರಿಸುಕೊಳ್ಳುವಷ್ಟು ದಡ್ಡನಲ್ಲ. ಒಂದು ದಿನ ಬೆಳಿಗ್ಗೆ ಹೆಂಡತಿ ಕರೆದು ಇವತ್ತು ನಾನು ಕೆಲಸ ಮುಗಿಸಿಕೊಂಡು ಬರೋಕೆ ಮುಂಚೆ ಇವತ್ತು ನಿಮ್ಮ ಅವ್ವ ಮಾಡಿದ್ಲಲ್ಲ ಅದ್ಮಾಡು ಎಂದು ಹೇಳಿ ಅವಳು ಏನಾದರೂ ಕೇಳುಕ್ಕೆ ಮುಂಚೇನೇ ಜಾಗ ಖಾಲಿಮಾಡಿದ.

ಮಲ್ಲಿ ಇನ್ನೂ ಹೊಸದಾಗಿ ಮದುವೆ ಆದೋಳು. ಗಂಡನ ಆಸೆ ಪೂರೈಸಲು ಉತ್ಸಾಹ. ನಮ್ಮಮ್ಮ ಮಾಡಿದ್ದು ಅದು ಏನು ಅಂತ ಯೋಚಿಸಿದಳು. ಸರಿ ಅದೇ ಇವನು ಎರಡು ದೊಡ್ಡ ಗಲಾಸು ಕುಡಿದು ಮೀಸೆ ವರಸಿಕೊಂಡ್ನಲ್ಲ ಆ ಪಾಯಿಸನೇ ಇರಬೇಕು ಅಂತ ಜಾಸ್ತಿ ಬೆಲ್ಲ ಹಾಕಿ ಪಾಯಿಸ ಮಾಡಿದಳು. ಗಂಡ ಮೆಚ್ಚುತ್ತಾನೇ ಅಂತ ಕಾಯ್ಕೊಂಡಿದ್ಲು.


ಸಂಜೆ ಕಲ್ಲ ಮನೆಗೆ ಬಂದ. ಮಲ್ಲಿ ತಾನು ಮಾಡಿದ್ದ ಪಾಯಿಸ ತಂದುಕೊಟ್ಟರೆ ಅವನಿಗೆ ಅಸಾಧ್ಯ ಕೋಪ. ಹೆಂಡತಿಯನ್ನು ನಾನು ಅದ್ಮಾಡು ಮಾಡು ಅಂದರೆ ನೀನು ಇದ್ಮಾಡಿದಿಯಾ ಎಂದು ಬೈದ. ಆಮೇಲೆ ಮಾಡಿದ್ದ ಪಾಯಿಸ ಎಲ್ಲಾ ಒಬ್ಬನೇ ಕುಡಿದ ಸರಿ. ಆದರೂ ಹೆಂಡತಿಯ ಮೇಲಿನ ಅವನ ಕೋಪ ಇಳೀಲಿಲ್ಲ. ಮಲ್ಲಿಗೂ ಈ ಮೂದೇವಿ ಏನು ಅಂತ ಸರಿಯಾಗಿ ಹೇಳದಲೇ ನನ್ನೇ ಬೈತಿದೆಯಲ್ಲ ಅಂತ ವಿಪರೀತ ಸಿಟ್ಟು.

ಮತ್ತೆ ಅವತ್ತು ತಿಂದದ್ದರ ಹೆಸರು ನೆನಪಿಸಿಕೊಳ್ಳಲು ಕಲ್ಲ ಪ್ರಯತ್ನಿಸಿದ. ಆದರೆ ಏನೂ ಪ್ರಯೋಜನವಾಗಲಿಲ್ಲ. ಹೆಂಡತಿಯ ಮೇಲಿನ ಹಳೆಯ ಮುನಿಸು ಮಾಸಿದ ಮೇಲೆ ಮತ್ತೆ ಕಲ್ಲ ಇವತ್ತಾದರೂ ಅದ್ಮಾಡು ಎಂದು ಹೇಳಿಹೋದ. ಮಲ್ಲಿ ಮತ್ತೆ ಯೋಚಿಸಿದಳು. ಅವಳಮ್ಮ ಹುಗ್ಗಿ ಮಾಡಿದ್ದಳು ಅಂತ ನೆನಪಿಸಿಕೊಂಡು ಅವತ್ತು ಹುಗ್ಗಿ ಮಾಡಿಟ್ಟಳು.

ಸಂಜೆ ಮನೆಗೆ ಬಂದಾಗ ಈ ಹುಗ್ಗಿ ನೋಡಿದ ಕಲ್ಲನಿಗೆ ಕೆಂಡಾಮಂಡಲ ಕೋಪ. ಹೆಂಡತಿನ ಚೆನ್ನಾಗಿ ಬೈದ. ಹಾಗೇ ಕೆನ್ನೆಗೆ ಚಟ್ಟಾರೆಂದು ಹೊಡೆದೂ ಬಿಟ್ಟ. ಆವಾಗ ಗಂಗಮ್ಮ ಒಳಗೆ ಬಂದು ನೋಡಿದರೆ ಮುದ್ದಿನ ಸೊಸೆ ಕೆನ್ನೆ ಸೊಸೆ ಇಷ್ಟು ದಪ್ಪ ಊದಿದೆ. ಮಗನ ಮೇಲೆ ಕೋಪದಿಂದ ನಿನಗೇನೂ ಗ್ಯಾನ ಗೀನ ಐತೋ ಇಲ್ಲವೋ ಹಿಂಗೆ ಹೊಡೆದಿದೀಯಾ, ಮಗು ಕೆನ್ನೆ ಹೀಗೆ ಕಡುಬಿನ ಹಾಗೆ ಊದ್ಕೈತೆ ಎಂದಳು. ಅವಳು ಹೀಗೆ ಹೇಳುತ್ತಿರುವಾಗಲೇ ಕಲ್ಲ ಹಾಂ ಅದೇ ಕಡುಬು, ಕಡುಬು ನಾ ಹೇಳಿದ್ದು ಕಡುಬು ಮಾಡು ಅಂತಾ ಚಂಗನೆ ಒಂದು ಸಲ ನೆಗೆದ. ಆಮೇಲೆ ಪೆದ್ದುಮುಖ ಮಾಡಿಕೊಂಡು ನಿಂತ.

ಆಗ: ಕಲ್ಲನಿಗೆ ಕಡುಬು ಹೆಸರು ಗೊತ್ತಾದ್ದಕ್ಕೆ ಖುಷಿ ಪಡಬೇಕೋ ಅಥವಾ ಹೊಸ ಹೆಂಡತಿಗೆ ಇಷ್ಟು ಜೋರಾಗಿ ಹೊಡೆದಿದ್ದಕ್ಕೆ ನಾಚಬೇಕೋ ಎನ್ನುವ ಗೊಂದಲ. ಕರಿಯಮ್ಮನಿಗೆ ಇಷ್ಟು ದಿನ ಚೆಂದಾಗಿದ್ದ ಈ ಕಲ್ಲನಿಗೆ ಇವತ್ತೇನಾಯಿತು ಹಾಗೆ ಹೊಡೆದು ಹೀಗೆ ಈಗ ಬೆಪ್ಪಾಗಿ ನಿಂತವನೆ ಎನ್ನುವ ಗೊಂದಲ. ಮಲ್ಲಿಗೆ ತನ್ನ ಗಂಡನ ಪೆದ್ದುತನ ನೋಡಿ ಕಿಸಕಿಸ ನಗಬೇಕೋ ಅಥವ ಅವನು ಹೊಡೆದದ್ದಕ್ಕೆ ಮುಳುಮುಳು ಅಳಬೇಕೋ ಎನ್ನುವ ಗೊಂದಲ.

ಓದುಗರೆ, ಇದರಲ್ಲೇನು ತಮಾಷೆ ಇದೆ ಎಂದು ನೀವು ಕೇಳುವ ಮೊದಲೇ, ಇದು ಹೆಣ್ಣಿನ ಮೇಲಿನ ಗಂಡಿನ ಎಂದು ಮುಗಿಯದ ಕ್ರೌರ್ಯದ ದುರಂತ ಕತೆ ಎಂದು ಸ್ತ್ರೀವಾದಿಗಳು ತರಾಟೆಗೆ ತೆಗೆದುಕೊಳ್ಳುವ ಮೊದಲೇ ಒಂದಾನೊಂದು ಕಾಲದ ಆ ಗೊಂದಲದ ಕ್ಷಣದಲ್ಲಿಯೇ ಈ ಕತೆಯನ್ನು ಮುಗಿಸುತ್ತಿದ್ದೇವೆ.



ಚಿಂತಾಕ್ರಾಂತ

- ಆನಂದ

ಗೆಳೆಯ ನಾಣಿ ಖಿನ್ನನಾಗಿ ಕಚೇರಿಯಲ್ಲಿ ಕುಳಿತಿದ್ದ. ಏನಿರಬಹುದು ಅವನ ಸಮಸ್ಯೆ? ಪರಿಹಾರ ನೀಡಲು ಸಾಧ್ಯವಾಗದಿದ್ದರೂ ಸಮಸ್ಯೆಯನ್ನಾದರೂ ಆಲಿಸಬಹುದಲ್ಲವೆ? ಮುಖ್ಯಮಂತ್ರಿಗಳ ಜನತಾ ದರ್ಶನದಂತೆ.

'ಹೇಳುವಂತನಾಗು ಗೆಳೆಯ. ಏನೀ ನಿನ್ನ ಚಿಂತೆ?' ಎಂದು ನಾಣಿಯನ್ನು ಕೇಳಿದೆ ಅವನ ಬೆನ್ನಮೇಲೆ ಕೈಯಾಡಿಸುತ್ತಾ.

ನನ್ನ ಸ್ಪರ್ಶದ ಪ್ರೇರಣೆ ಪಡೆದ ನಾಣಿ ಬಾಯಿ ಬಿಡತೊಡಗಿದ: ''ನನ್ನ ಹೆಂಡತಿಗೆ ನಿನ್ನೆ ರಾತ್ರಿ ಕನಸು ಬಿದ್ದಿದಂತೆ. ಅದರಲ್ಲಿ ನಾವೆಲ್ಲ ಮುಂಬೈನಲ್ಲಿದ್ದೆವು. ನಾವು ಎಂದರೆ ನಾನು ನನ್ನ ಹೆಂಡತಿ ಮತ್ತು ಇತರ ಅನೇಕ ಜೋಡಿಗಳು. ಆ ಇತರರು ಯಾರು ಎಂದು ಆಕೆಗೆ ನೆನಪಿಲ್ಲ. ಆದರೆ ಹಲವಾರು ಜೋಡಿಗಳಿದ್ದರು ಎಂಬದು ಮಾತ್ರ ನೆನಪಿದೆಯಂತೆ.''

''ಸರಿ ಮುಂದುವರಿಸು'' ಎಂದೆ.

''ಮುಂಬೈನಲ್ಲಿ ಒಂದು ರಸ್ತೆ ಬದಿಯಲ್ಲಿ ಎಲ್ಲರೂ ನಿಂತಿದ್ದಾರೆ. ಯಾವುದೋ ಜಾಗಕ್ಕೆ ಗುಂಪು ಹೊರಟಿದೆ. ಒಂದು ವ್ಯಾನ್ ಬಂದಿತು. ಎಲ್ಲರೂ ಹತ್ತತೊಡಗಿದರು. ಆದರೆ ಎಲ್ಲರಿಗೂ ಜಾಗವಿರಲಿಲ್ಲ.''

''ಓಕೆ''

''ಒಬ್ಬರ ತೊಡೆಯ ಮೇಲೆ ಇನ್ನೊಬ್ಬರನ್ನು ಕೂರಿಸಿಕೊಳ್ಳಿ ಆಗ ಸರಿ ಹೋಗುತ್ತದೆ ಎಂದು ಯಾರೋ ಸಲಹೆ ಮಾಡಿದರಂತೆ. ಅದನ್ನು ಅನುಷ್ಠಾನ ಗೊಳಿಸಿದಾಗ ನನ್ನ ಹೆಂಡತಿ ಹೇಳಿದ ಪ್ರಕಾರ ನನ್ನ ತೊಡೆಯ ಮೇಲೆ ಅವಳು ಕುಳಿತಿರಲಿಲ್ಲ. ನಾನು ಬೇರೆ ಯಾರೋ ತರುಣೀನ ಕೂರಿಸಿಕೊಂಡಿದ್ದೆ!

'ವಾ! ವಾ!!' ಎಂದೆ ನಾನು.

''ಆದರೆ ಅದನ್ನು ನೋಡಿ ನನ್ನ ಹಂಡತಿಗೆ ಕೆಂಡಾಮಂಡಲ ಕೋಪ ಬಂದು ನನ್ನನ್ನು ಅಲ್ಲೇ, ಎಲ್ಲರೆದರು ಹೀನಾಮಾನ ಬೈದಳಂತೆ. ಆಗ ಕರೆಂಟ್ ಹೋಗಿ ಧಾರಾವಾಹಿ ನಿಂತುಹೋಗುವಂತೆ ಕನಸೂ ಅಲ್ಲಿಗೇ ಕಟ್ ಆಯಿತು. ಮುಂದೇನಾಯಿತೋ ಗೊತ್ತಿಲ್ಲ ಎಂದಳು'' ಎಂದು ನಾಣಿ ವಿವರಿಸಿದ.

''ಸರಿ. ಆದರೆ ನಿನ್ನ ಚಿಂತೆಯಾದರೂ ಏನು?'' ಎಂದೆ. ಏಕೆಂದರೆ ಆ ಕನಸನ್ನು ಅವನೇಕೆ ಮನಸ್ಸಿಗೆ ಹಚ್ಚಿಕೊಂಡಿದ್ದ ಎಂಬುದು ನನಗೆ ಅರ್ಥವಾಗಿರಲಿಲ್ಲ.


''ಆ ಕನಸು ನನಗಾದರೂ ಬೀಳಬಾರದಿತ್ತೆ?'' ಎಂದು ಹಲುಬಿದ.

''ಅರೆ! ಅದರಿಂದ ನಿನಗೇನಾದರೂ ಲಾಭವಾಗುತ್ತಿತ್ತೇನು?'' ನಾನು ಕೇಳಿದೆ.

''ಹೌದು ಗುರು. ಆ ಕನಸು ನನಗೇ ಬಿದ್ದಿದ್ದರೆ ನಾನು ಅದ್ಯಾವುದೋ ತರುಣೀನ ನನ್ನ ತೊಡೆ ಮೇಲೆ ಕೂರಿಸಿಕೊಂಡು ಬೆಚ್ಚಗಿನ ಸ್ಪರ್ಶ ಅನುಭವಿಸ್ತಿರಲಿಲ್ಲವೆ?'' ಎಂದು ಬಾಯಿ ಚಪ್ಪರಿಸಿದ.

ನಾನು ಬೆರಗಾದೆ. ಎಚ್ಚೆತ್ತಿಕೊಂಡು ''ಆದರೆ ಮರಿ ನಿನ್ನ ಕನಸಿನಲ್ಲೂ ನಿನ್ನ ಹೆಂಡತಿ ಹೀನಾಮಾನ ಬೈಯ್ತಿದ್ದಳಲ್ಲ. ಅದಕ್ಕೇನು ಹೇಳ್ತೀ'' ಎಂದು ಕೇಳಿದೆ.

''ರೇಗೋದು ಮಾಮೂಲು ಗುರು. ಆದರೆ ಆ ಯುವತೀ ಕಂಪನಿ ಮುಂದೆ ಅದು ಕೇಳಿಸ್ತಿರಲಿಲ್ಲ. ಅದು ಮಿಸ್ಸಾಯ್ತು ಛೆ'' ಎಂದು ತನ್ನ ಚಿಂತೆಯ ಕಾರಣವನ್ನು ವಿವರಿಸಿದ.



ಜಾಗಿಂಗ್

– ಇಂದು ರಮೇಶ್

ಯಾವ ಡಾಕ್ಟರರ ಹತ್ತಿರ ಹೋಗಿ ನೋಡಿ ಬೇಕಾದರೆ, ಅವರೆಲ್ಲಾ ಹೇಳುವುದು ಒಂದೇ. ನಿಮ್ಮ ವಿವಿಧ ಪರೀಕ್ಷೆಗಳನ್ನೆಲ್ಲಾ ಮುಗಿಸಿ, ದೊಡ್ಡ ದೊಡ್ಡ ರಿಪೋರ್ಟುಗಳನ್ನು ಕೂಲಂಕುಶವಾಗಿ ನೋಡಿ, ಮಧ್ಯೆಮಧ್ಯೇ ''ಹೂ, ಐ ಥಾಟ್ ಸೋ'' ಅಂತಲೋ, ಇಲ್ಲಾ ಸುಮ್ಮನೆ ತಲೆ ಆಡಿಸಿಯೋ ಕೊನೆಗೆ ''ನಿಮ್ಮ ರಿಪೋರ್ಟ್ ಎಲ್ಲಾ ಸರಿಯಾಗಿದೆ. ಆದರೂ ನಿಮ್ಮ ವಯಸ್ಸಿಗೆ ಬರುವಂತಹ ಹಲವು ತೊಂದರೆಗಳು ಬಂದಿವೆ. ಇದಿಷ್ಟು ಔಷಧಿ ತೆಗೆದುಕೊಳ್ಳಿ'' ಅಂತ ಉದ್ದದ ಪಟ್ಟಿ ಕೊಟ್ಟು ಆಮೇಲೆ ''ಸ್ವಲ್ಪ ತೂಕ ಕಡಿಮೆ ಮಾಡಿ'' ಅಂತಾರೆ. ಒಮ್ಮೆ ಹೀಗೇ ಮಾತಾಡುತ್ತಾ ನಮ್ಮ ಡಾಕ್ಟರು; 'ಬೆಳಗ್ಗಿನಿಂದ ಏನೇನು ತಿನ್ನುತ್ತೀರಿ ಹೇಳಿ' ಅಂದರು. ನಾನು 'ಮೂರು ಟೋಸ್ಟ್' ಅನ್ನುತ್ತಿದ್ದಂತೆಯೇ 'ಆಹಾ, ನಾನು ಎರಡೇ ಟೋಸ್ಟ್ ತಿನ್ನೋದು' ಅಂದು ನಕ್ಕಾಗ ನನಗೆ ಸ್ವಲ್ಪ ರೇಗಿತು. ನಾನಂದೆ, 'ಗೊತ್ತಾಗುತ್ತೆ, ನಿಮ್ಮನ್ನು ನೋಡಿದರೆ ಒಂದೇ ಟೋಸ್ಟ್ ತಿನ್ನುವವರ ಹಾಗಿದ್ದೀರಾ' ಅಂದುಬಿಟ್ಟೆ.

ಹಾಗೆ ವ್ಯಾಯಾಮ ಮಾಡಿ, ಯೋಗ ಮಾಡಿ, ವಾಕಿಂಗ್ ಹೋಗಿ ಅನ್ನುವವರು ಬರೀ ಡಾಕ್ಟರೇ ಅಲ್ಲ, ಸ್ನೇಹಿತರು, ನೆಂಟರು, ಮಕ್ಕಳು ಎಲ್ಲರಿಗೂ ಈ ವಿಷಯದ ಬಗ್ಗೆ ಹೇಳುವುದು ಬಹಳ ಇಷ್ಟ. 'ಹೇಳುವುದು' ಅಂದೆ, 'ಮಾಡುವ' ಮಾತು ಬಂದಾಗ ಮಾತು ಬದಲಾಯಿಸುತ್ತಾರೆ ಎಲ್ಲ!

ಮೊನ್ನೆ ಇಂಟರ್ನೆಟ್ಟಿನಲ್ಲಿ ಯಾರೋ ಒಬ್ಬಾಕೆ ತನ್ನ ದುಃಖ ಹೇಳಿಕೊಂಡಿದ್ದಳು. ಅವಳು ಹೇಳಿದ್ದೆಲ್ಲಾ ನಿಜ ಅನ್ನಿಸಿತು ನನಗೆ. ವ್ಯಾಯಾಮದ ಬಗ್ಗೆ ನನ್ನದೇ ಕೆಲವು ವಿಚಾರಗಳಿವೆ. ಅದರಲ್ಲಿ ಹಲವನ್ನು ನಿಮ್ಮೊಡನೆ ಹಂಚಿಕೊಳ್ಳುತ್ತಿದ್ದೇನೆ. ಜಾಗಿಂಗ್ ಮಾಡಿದರೆ ಆಯುಷ್ಯ ಹೆಚ್ಚುತ್ತಂತೆ. ಒಂದು ಸಂಶಯ. ಈಗ ನಮ್ಮ ದೇಶದಲ್ಲಿ ಮುದುಕರ ಸಂಖ್ಯೆ ಹೆಚ್ಚುತ್ತಿದೆಯಂತೆ. ಮುದುಕರಿಗೆ ಇನ್ನಷ್ಟು ಆರೋಗ್ಯ ಸಿಕ್ಕಿದರೂ ಆ ಸಮಯದಲ್ಲಿ ಏನು ಮಾಡುವುದು ಅಂತ ಯಾರಿಗೂ ಗೊತ್ತಿಲ್ಲ. ಸಾರಿ, ಮಲಗಿ ಗೋಡೆ ನೋಡಬೇಕಾದ ಸ್ಥಿತಿಗೆ ಜಾಗಿಂಗ್ ಯಾಕಪ್ಪಾ?

ನನ್ನ ಸ್ನೇಹಿತೆ ಹೇಳುತ್ತಾಳೆ - ಜಾಗಿಂಗ್ ಮಾಡುವುದು ತನ್ನ ಬಿಸಿ ಉಸಿರಿನ ಶಬ್ದ ಕೇಳಿಸಿಕೊಳ್ಳುವುದಕ್ಕಂತೆ!

ಹೆಲ್ತ್ ಕ್ಲಬ್ಬಿಗೆ ಸೇರಿಕೊಂಡ ಸ್ನೇಹಿತರು ತುಂಬ ಯೋಚನೆ ಮಾಡಿದರು, ತೂಕ ಕಮ್ಮಿ ಆಗಲೇ ಇಲ್ಲವಲ್ಲಾ ಅಂತ. ಆಮೇಲೆ ಗೊತ್ತಾಯಿತು ಅವರಿಗೆ, ಕ್ಲಬ್ಬಿಗೆ ಸೇರುವುದಷ್ಟೇ ಅಲ್ಲ, ದಿನಾ ಅಲ್ಲಿಗೆ ಹೋಗಿ ಕಸರತ್ತ ಮಾಡಬೇಕು ಅಂತ!

ನಾನಂತೂ ನನ್ನ ವ್ಯಾಯಾಮಾನ ಬೆಳಗಿನ ಝಾವ ಮಾಡಿಬಿಡುತ್ತೇನೆ. ಯಾಕೆ ಗೊತ್ತಾ? ಆ ಹೊತ್ತಿನಲ್ಲಿ ನನ್ನ ಮೆದುಳಿಗೆ ನಾನು ಏನು ಮಾಡುತ್ತಿದ್ದೇನೆ ಎಂದು ಗೊತ್ತಾಗುವುದಿಲ್ಲ!

ಬಗ್ಗಿ ಕಾಲಬೆರಳು ಮುಟ್ಟುವುದು ಒಂದು ವ್ಯಾಯಾಮ, ತುಂಬ ಒಳ್ಳೆಯ ವ್ಯಾಯಾಮ ಅಂತಾರೆ. ದೇವರು ಹಾಗೆ ನಾವು ಮಾಡಲೇಬೇಕು ಅಂದುಕೊಂಡಿದ್ದಿದ್ದರೆ ಸೊಂಟದ ಹತ್ತಿರ ಕಾಲಬೆರಳು ಕೊಡುತ್ತಿರಲಿಲ್ಲವೇ?

ವಾಕಿಂಗ್ ಹೋಗಿ ಅನ್ನೋದು ಎಲ್ಲರೂ ಹೇಳುವ ವ್ಯಾಯಾಮ. ವಾಕಿಂಗ್, ಅದರಲ್ಲೂ ಬೆಳಗಿನ ಝೂವ, ತಣ್ಣಗಿನ ಗಾಳಿಯಲ್ಲಿ ವಾಕಿಂಗ್ ಮಾಡುವುದು ತುಂಬಾ ಒಳ್ಳೆಯದು, ಬೇರೆಯವರು ಮಾಡುತ್ತಿದ್ದರೆ ನಾನು ಕಿಟಕಿಯಿಂದ ನೋಡಿ ಸಂತೋಷಪಡುತ್ತೇನೆ.


ಕೊನೆಗೆ ದಿನಂಪ್ರತಿ ವ್ಯಾಯಾಮ ಮಾಡಿದರೆ ಆಗುವ ಲಾಭವಾದರೂ ಏನು? ಸಾಯುವಾಗ ನಾವು ತುಂಬಾ ಆರೋಗ್ಯವಂತರಾಗಿರುತ್ತೀವಿ ಅನ್ನೋ ಒಂದೇ ಸಮಾಧಾನ ಅಲ್ಲವೇ?

ಕೆಲವು ವಿಪರೀತ ಆಸಕ್ತರು, ಸ್ಪೆಷಲ್ ಶೂ ಹಾಕಿಕೊಂಡು ಊರುಗೋಲು ಹಿಡಿದು ಕ್ರಾಸ್ ಕಂಟ್ರಿ ವಾಕಿಂಗ್ ಅಂತ ಹೋಗುತ್ತಾರೆ. ಅವರಿಗೆ ನನ್ನದು ಒಂದೇ ಸಲಹೆ. ದಯವಿಟ್ಟು ಯಾವುದಾರೂ ಚಿಕ್ಕ ಕಂಟ್ರಿ ಆರಿಸಿಕೊಳ್ಳಿ ಇಲ್ಲದಿದ್ದರೆ ನಾವೆಲ್ಲಿ ನಿಮ್ಮನ್ನು ಹುಡುಕಿಕೊಂಡು ಹೋಗುವುದು ಅಂತ.

ನಮ್ಮ ಸ್ನೇಹಿತರೊಬ್ಬರು ಕಟ್ಟುನಿಟ್ಟಾಗಿ ಹೇಳುತ್ತಾರೆ, 'ನೋ ಜಾಗಿಂಗ್ ಫರ್ ಮಿ. ನಾನು ಜಾಗ್ ಮಾಡಿದರೆ ನನ್ನ ಗ್ಲಾಸಿನಲ್ಲಿರುವ ಐಸ್‌ಕ್ಯೂಬ್ಸ್ ಮೇಲೆ ಹಾರುತ್ತವೆ' ಅಂತ.

ಜಾಗಿಂಗ್ ಎನಿಬಡೀ?

★★★



ಇರಲಾರ್ದೆ ಇರ್ವೆ ಬಿಟ್ಕೊಂಡ್ಹಂಗೆ


– ಬೇಲೂರು ರಾಮಮೂರ್ತಿ

ಬೋಡು ತಲೆ ಮೇಲೆ ರಪ್ಪೆಂದು ಹೊಡ್ಕೊಂಡ ಶಾಂತರಾಜು ರೌದ್ರಾವತಾರ ತಾಳಿ ಮನೆಗೆ ಬಂದಾಗ ಅವರ ಹೆಂಡ್ತಿ ಶಾಂತಮ್ಮನೂ ರುದ್ರಮ್ಮನಾಗಿ ''ಇದೇನ್ ಬಂತ್ರಿ ನಿಮಗೆ ಮನೆಯಿಂದ ಆಚೆ ಹೋಗುವಾಗ ಸರಿಯಾಗಿ ಹೋಗಿದ್ರಿ ಏನು ಚೇಳು ಕುಟುಕ್ತಾ, ಹಾವು ಕಡೀತಾ ಏನಾಯ್ತು'' ಅಂದರು. ಹೆಗಲ ಮೇಲಿದ್ದ ಟವಲನ್ನು ರಪ್ಪಂತ ನೆಲದ ಮೇಲೆ ಬಿಸಾಕಿ ''ಈ ದರಿದ್ರ ಜನಗಳನ್ನ ಮಾತಾಡಿಸಲೇಬಾರ್ದು ಕಣೆ, ಕೇಳಿದ್ದಕ್ಕೊಂದು ಉತ್ರ ಕೊಡೋದು ಬಿಟ್ಟು ಎಲ್ಲ ತಲೆ ಹರಟೆಗಳು'' ಅಂದರು. ಸರಿಹೋಯ್ತು ಎಲ್ರೂ ನಿಮಗೆ ಇಷ್ಟ ಆಗೋ ಹಾಗೇ ಮಾತಾಡ್ಬೇಕಾ, ಹಾಗೆ ಆಗುತ್ತ, ಅಲ್ಲರೀ ಕೈ ಹಿಡಿದ ಹೆಂಡ್ತಿ ಮನಸ್ಸಿಗೆ ನೋವಾಗದ ಹಾಗೆ ನಡ್ಕೊಳೋಕೆ ನಿಮ್ ಕೈಲಿ ಆಗಲಿಲ್ಲ, ಅಂದ್ಮೇಲೆ ನಿಮಗಿಷ್ಟವಾಗೋ ಹಾಗೆ ಯಾಕೆ ಮಾತಾಡ್ತಾರೆ ಅಂದಳು ಶಾಂತಮ್ಮ. ಅವರತ್ರ ತಲೆ ಚಚ್ಕೊಂಡು ಚಚ್ಕೊಂಡು ಗಂಟಲು ಒಣಗಿ ಹೋಗಿದೆ ಒಂದು ಕಪ್ ಕಾಫಿ ಕೊಡು ಮೊದಲು ಅಂದು ಒಂದು ಚಿಟಿಕೆ ನಶ್ಯ ಏರಿಸಿ ನಾಳೆ ಹೊರಗೆ ಹೋದಾಗ ಯಾರಾದರೂ ಸಿಕ್ಕಿದರೆ ಮಾತಾಡಿಸಬೇಕೋ ಬೇಡವೋ. ಮಾತಾಡಿದರೆ ಏನು ಮಾತಾಡಬೇಕು ಅಂತ ಆಗಲೇ ಲೆಕ್ಕಾಚಾರ ಹಾಕಲು ಷುರು ಮಾಡ್ಕೊಂಡ್ರು. ಗಂಡನ ಕೈಗೆ ಬಿಸಿ ಕಾಫಿ ತಂದ್ಕೊಟ್ಟು ''ಅದ್ಯಾರು ನಿಮಗೇನಂದ್ರು ಅಂತ ಹೇಳಿ'' ಅಂದರು.

ಒಂದೆರಡು ಗುಟುಕು ಕಾಫಿ ಕುಡಿದು ಇವತ್ತೆಲ್ಲ ತರ್ಲೆಗಳ ಸಹವಾಸವೇ ಆಯಿತು. ನೋಡು ಮೊದಲು ಕಪಿನೀಪತಿ ಸಿಕ್ದ... ಏನಪ್ಪ ಚೆನ್ನಾಗಿದೀಯಾ ಕಾಫಿ ಆಯ್ತಾ ಅಂತ ಕೇಳ್ದೆ ಹಾಗೆ ಕೇಳೋದು ಸಾಮಾನ್ಯ ತಾನೇ. ಅದಿಕ್ಕೆ ಏನನ್ ಬೇಕು ಅವನು ಆಯ್ತಪ್ಪ ಅನ್ ಬೇಕು ತಾನೇ. ಅದು ಬಿಟ್ಟು ಕಾಫಿ ಆಗಿಲ್ಲ ಕೊಡಿಸ್ತೀಯಾ ಅಂತಾನೆ. ಇಲ್ಲ ನಾನು ಸ್ವಲ್ಪ ಅರ್ಜೆಂಟಾಗಿ ಹೊರಟಿದೀನಿ ಅಂದ್ರೆ ಮತ್ತೆ ಕಾಫಿ ಆಯ್ತಾ ಅಂತ ಯಾಕೆ ಕೇಳ್ತೀಯಾ... ಮರ್ಯಾದೆಯಾಗಿ ಕಾಫಿ ಕೊಡಿಸು ಇಲ್ದಿದ್ರೆ ಕಾಫಿಗೆ ದುಡ್ಡು ಕೊಟ್ಬಿಟ್ಟಾದರೂ ಹೋಗು ನಾನೇ ಕಾಫಿ ಕುಡ್ಕೊತೀನಿ ಅಂದ. ಇದೆಂಥ ಮಾತೇ... ಅಂದು ಲೋಟದಲ್ಲಿ ಉಳಿದಿದ್ದ ಕಾಫಿಯನ್ನು ಒಂದೇ ಸಾರಿ ಬಾಯಿಗೆ ಬಸಿದುಕೊಂಡರು. ''ಅಯ್ಯೋ ಅದಿಕ್ಯಾಕೆ ಉರಿದು ಬೀಳ್ತೀರ ಒಂದ್ ಕಾಫಿ ಕೊಡಿಸಿದ್ರೆ ಆಗಿರೋದು'' ಅಂದಳು ಶಾಂತಮ್ಮ. ''ಲೇ ಇಲ್ಲಿ ಒಂದು ಕಾಫಿ ಪ್ರಶ್ನೆ ಅಲ್ಲ.. ಐದು ರೂಪಾಯಿನ ಪ್ರಶ್ನೆನೂ ಅಲ್ಲ... ನಾನು ಕಾಫಿ ಆಯ್ತಾ ಅಂತ ಕೇಳಿದ್ದೇ ತಪ್ಪಾಯ್ತು ಅನ್ನೋಹಾಗೆ ಡಿಮ್ಯಾಂಡ್ ಮಾಡಿದ್ನಲ್ಲ ಅದು''.... ಆಯ್ತು ಬಿಡು ಹೇಗೋ ಅವನಿಂದ ತಪ್ಪಿಸಿಕೊಂಡು ಹೋದೆ. ನಮ್ಮ ರಾಂಭಟ್ಟ ಸಿಕ್ದ... ನಮಸ್ಕಾರ. ಆಯ್ತ ತಿಂಡಿ ಕಾಫಿ ಅಂದೆ. ಅದಿಕ್ಕೆ ಅವನು ನನ್ನ ಕೈ ಹಿಡ್ಕೊಂಡು ನೋಡು ಶಾಂತರಾಜು ಈಚೆಗೆ ಯಾಕೋ ಮರೆವು ಬೆಳಿಗ್ಗೆ ತಿಂಡಿ ತಿನ್ನೋದೇ ಮರೆತುಹೋಗಿತ್ತು. ಹೇಗೂ

ಜ್ಞಾಪಿಸಿದೀಯ ಅದೂ ಹೋಟೆಲ್ ಮುಂದೇನೇ ಬಾ. ಒಂದೆರಡು ಇಡ್ಲಿ ವಡೆ, ಒಂದು ದೋಸೆ ಕಾಫಿ ಕೊಡಿಸು ಅಂದ. ನಾನು ಅರ್ಜೆಂಟಾಗಿ ಪೇಟೆಗೆ ಹೋಗಬೇಕು ನೀನೇ ತಿನ್ನು ಹೋಗು ಅಂದ್ರೆ ನನ್ನ ಷರಟು ಜಗ್ಗಿ ಮರ್ಯಾದೆಯಾಗಿ ತಿಂಡಿ ಕೊಡಿಸು... ಮರೆತು ಹೋಗಿದ್ದ ನನಗೆ ತಿಂಡಿ ವಿಚಾರ ಜ್ಞಾಪಿಸಿದೀಯ. ನಾನು ದುಡ್ಡೂ ತಂದಿಲ್ಲಸೋ ನೀನೇ ತಿಂಡಿ ಕೊಡಿಸಬೇಕು ಅಂದ. ಅವನನ್ನ ಹಾಗೂ ಹೀಗೂ ಅವಾಯ್ಡ್ ಮಾಡಿ ಹೋಗೋಕೆ ಸಾಕು ಸಾಕಾಯ್ತಪ್ಪ. ಅಲ್ಲ ತಿಂಡಿ ಆಯ್ತಾ ಅಂತ ಕೇಳಿದ್ದೇ ಅಪರಾಧ ಅನ್ನೋ ಹಾಗೆ ನೀನೇ ಕೊಡಿಸು ಅಂದ್ರೆ ಏನೇ ಮಾಡೋದು.. ಒಂದು ಆದ್ರೆ ಪರವಾಗಿಲ್ಲ ಅವು ಅಂಥೋವಲ್ಲ ಇದನ್ನೆ ಅಭ್ಯಾಸ ಮಾಡ್ಕೊಬಿಡುತ್ತೆ ಅಂದು ಷರಟುಬಿಚ್ಚಿ ಬೀಸಣಿಗೆಯಿಂದ ಗಾಳಿ ಹಾಕ್ಕೊಂಡ. ನೀವೂ ನಿಮ್ಮ ಫ್ರೆಂಡ್ಸೂ ಎಲ್ಲ ಸರಿಯಾಗಿದೀರ ಅಂದು ಇನ್ನೇನು ಹಿತ್ತಲಕಡೆ ಹೊರಟಿದ್ದ ಹೆಂಡ್ತಿ ಕೈ ಹಿಡಿದು ಕೂರಿಸಿ... ಕೂತ್ಕೊ ಇನ್ನು ಮುಗಿದಿಲ್ಲ ಇನ್ನೊಂದು ದೊಡ್ಡ ರಾದ್ಧಾಂತ ಇದೆ ಅಂದ. ''ಅಯ್ಯೊ ನಿಮ್ಮ ಪುರಾಣ ನನಗೆ ಗೊತ್ತಿಲ್ವ... ಇನ್ಯಾರ್ನೋ ಊಟ ಆಯ್ತಾ ಅಂತ ಕೇಳಿರ್ತೀರ ಅವರು ಆಗಿಲ್ಲ ಊಟ ಕೊಡಿಸು ಅಂತ ಹಿಂದೆ ಬಿದ್ದಿರ್ತಾರೆ ಅಷ್ಟೆ ತಾನೇ'' ಅಂದಳು ಶಾಂತಮ್ಮ, ಮುಖ ಅರಳಿಸಿ ಕಣ್ಣರಳಿಸಿ ಹೆಂಡ್ತಿ ಕಡೆ ನೋಡಿ ಅವಳ ಕೆನ್ನೆ ಹಿಂಡಿ ''ಜಾಣೆ ಬಲು ಜಾಣೆ... ಅಲ್ವೆ ನಿನಗೆ ಅದ್ಹೇಗೆ ಗೊತ್ತಾಯ್ತು ಅಂತ ಕೇಳಿದ.'' ''ನೀವು ಪುರಾಣ ಬಿಚ್ಕೊತಾ ಇದ್ದಿದ್ದು ಕ್ಕೇಳಿದ್ನಲ್ಲ ಮೊದ್ಲು ಕಾಫಿ ತಿಂಡಿ ಆಮೇಲೆ ಊಟ ಇದೇ ತಾನೇ'' ಅಂದಳು. ''ಕರಕ್ಟು ಕಣೆ, ಈಗ ನಾನು ಸ್ವಲ್ಪ ರೆಸ್ಟ್ ತಗೋತೀನಿ ಯಾರು ಬಂದು ಕೇಳಿದ್ರೂ, ನಾನು ಮನೇಲಿಲ್ಲ ಅಂತ ಹೇಳು ಅದರಲ್ಲೂ ಆ ದೇವಕಿ ಬಂದ್ರೆ ಅವರು ಊರಲ್ಲೇ ಇಲ್ಲ ಅಂದ್ಬಿಡು'' ಅಂದು ಕೋಣೆಯೊಳಕ್ಕೆ ಹೋದರು. ಶಾಂತಮ್ಮನ ಮೂಗಿಗೆ ಏನೋ ಬಡಿಯಿತು. ಅವಳೂ ಕೋಣೆಯೊಳಗೆ ಹೋಗಿ ''ರೀ ಏನ್ ಹೇಳ್ತಿದೀರ ನೀವು ದೇವಕಿ ಯಾಕೆ ನಿಮ್ಮನ್ನ ಹುಡುಕ್ಕೊಂಡ್ ಬರ್ತಾಳೆ'' ಅಂದಳು. ಹೆಂಡ್ತಿ ಕೈ ಹಿಡ್ಕೊಂಡು ಅಳೋ ಧ್ವನಿಯಿಂದ ''ಲೇ ಶಾಂತೂ.. ಶಾಂತೂ ನೀನು ಥೂ ಅಂದ್ರೂ ಪರವಾಗಿಲ್ಲ ನಾನೊಂದು ತಪ್ ಮಾಡ್ಬಿಟ್ಟೆ ಕಣೆ ಇನ್ನೆಂದೂ ಅಂಥಾ ತಪ್ ಮಾಡಬಾರದು ಅನಿಸಿದೆ ಕಣೆ'' ಅಂದರು. ''ಅಯ್ಯೋ ನಿಮ್ಮನೆ ಕಾಯ್ವಾಗ ನಿಮಗೇನ್ರೀ ಬಂತು ಈ ವಯಸ್ನಲ್ಲಿ ಅದೇನು ಮಾಡಿದ್ರಿ ಹೇಳಿ'' ಅಂದು ರಟ್ಟೆ ಹಿಡಿದೆಳೆದಾಗ ಶಾಂತರಾಜು ತತ್ತರಿಸಿ ಕೆಳಗೆ ಬಿದ್ದು ಹೆಂಡತಿಯ ರೌದ್ರಾವತಾರ ಕಂಡು ಅವಳು ಮಾಡಿಕೊಂಡಿರಬಹುದಾದ ಅಪಾರ್ಥವೂ ಅರಿವಾಗಿ ಎದ್ದು ನಿಂತು ''ಅಷ್ಟು ಅಗಲವಾಗಿ ಕಣ್ ಬಿಡಬೇಡ ಕಣೆ... ನೀನು ತಿಳ್ಕೊಂಡಿರೋಂತ ತಪ್ಪು ನಾನು ಮಾಡಿಲ್ಲ ಕಣೆ... ನೋಡು ದೇವಕಿ ರಸ್ತೇಲಿ ಬರ್ತಿದ್ಲು... ಕಾಫಿ ಆಯ್ತಾ, ತಿಂಡಿ ಆಯ್ತಾ, ಊಟ ಆಯ್ತಾ ಅಂತ ಕೇಳೋಷ್ಟೆ ಸಹಜವಾಗಿ ಏನಮ್ಮ ಮದುವೆ ಏನಾದ್ರೂ ಸೆಟ್ಲ್ ಆಯ್ತಾಂತ ಕೇಳಿದೆ ಅದಕ್ಕವಳು ಇನ್ನು ಸೆಟ್ಲ್ ಆಗಿಲ್ಲ ನೀವೇ ಮಾಡ್ಕೊತೀರಾ ಎರಡನೇ ಸಂಬಂಧವಾದರೂ ಪರವಾಗಿಲ್ಲ ಅಂದ್ಲು... ನಂಗ್ಯಾಕೋ ಭಯವಾಯ್ತು.. ಇಲ್ಲಾಂತ ತಲೆಯಾಡಿಸಿದೆ ಅದಕ್ಕವಳು ಮತ್ತೆ ನನ್ನ ಮದುವೆ ಆಯ್ತಾ ಅಂತ ಯಾಕೆ ಕೇಳಿದ್ರಿ, ಈಗ ನೀವೇ ಮಾಡ್ಕಳಿ ನಮ್ಮಪ್ಪನ್ನ ಕರ್ಕೊಂಡ್ ಬರ್ತೀನಿ

ಅಂತ ಮನೆಗೆ ಹೋಗಿದಾಳೆ'' ಅಂದಾಗ ಗಂಡನ್ನ ಕಂಡು ಅಯ್ಯೋ ಅನಿಸಿತು ಶಾಂತಮ್ಮನಿಗೆ. ಶಾಂತರಾಜು ಪೆಚ್ಚುಮೋರೆ ಹಾಕ್ಕೊಂಡು ನಿಂತರು. ''ನೋಡಿ ಇನ್ಮೇಲಿಂದ ಆಚೆಗೆ ಹೊರಟಾಗ ನೀವಾಯ್ತು ನಿಮ್ಮ ಕೆಲಸವಾಯ್ತು ಅಂತ ಹೋಗಿ ಬರಬೇಕು ಅದು ಬಿಟ್ಟು ಕಾಫಿ ಆಯ್ತಾ ತಿಂಡಿ ಆಯ್ತಾ ಅದಾಯ್ತಾ ಇದಾಯ್ತಾ ಅಂತ ಕೇಳ್ತಾ ತಾಪತ್ರಯ ತಂದ್ಕೊಂಡ್ರೋ ನಾನು ಸುಮ್ಮನಿರಲ್ಲ'' ಅಂತ ಶಾಂತಮ್ಮ ರೂಲಿಂಗ್ ಕೊಡೋ ಹೊತ್ತಿಗೂ ಬಾಗಿಲು ದಬದಬಾಂತ ಸದ್ದು ಆಗೋಕೂ ಸರಿಹೋಯ್ತು. ಆ ದೇವಕಿಗೆ ಗ್ರಹಚಾರ ಬಿಡಿಸ್ತೀನಿ ಅಂದ್ಕೊಂಡು ಶಾಂತಮ್ಮ ಬಾಗಿಲು ತೆಗೆಯೋಕೆ ಹೋದರೆ ಶಾಂತರಾಜು ಬಾಗಿಲ ಸಂದಿಯಿಂದ ಇಣುಕಿದರು.



ಅಪಾರ್ಥ ಪದ ಚಿಂತಾಮಣಿ

- ಎಚ್. ಗೋಪಾಲಕೃಷ್ಣ

(ಯಾರು ಬೇಕಾದರೂ ಇದನ್ನು ಮತ್ತಷ್ಟು ಇಂಪ್ರೂವಿಸಬಹುದು, ನನ್ನ ತಕರಾರು ಇಲ್ಲ!)

ಅ

ಅ: ಪ್ರಪಂಚದಲ್ಲಿ ಮೊದಲು ಹುಟ್ಟಿದ ಅಕ್ಷರ. ಅದರಿಂದಲೇ ಅ ದಿಂದ ಆರಂಭವಾಗುವ ವಸ್ತುಗಳಲ್ಲಿ ಎಲ್ಲರಿಗೂ ಅತ್ಯಂತ ಪ್ರೀತಿ. ಉದಾ: ಅಧಿಕಾರ, ಅನ್ನ ಇತ್ಯಾದಿ. ಬೆಂಗಳೂರು ದೂರದರ್ಶನದವರಿಗೆ ಅತಿ ಪ್ರೀತಿಯ ಅಕ್ಷರ. ಅದರಿಂದಾಗಿ ಹ ಬರುವೆಡೆಯಲ್ಲಿ ಅವರು ಅ ಪ್ರಯೋಗಿಸುತ್ತಾರೆ. ಉದಾ: ಅಸು-ಹಸು, ಅರವು-ಹರವು, ಹಕ್ಕಿ-ಅಕ್ಕಿ ಇತ್ಯಾದಿ.

ಅಂತ: ವ್ಯಾಕರಣ ತಿಳಿಯದಿರುವವರು ಎಂದು ಬರೆಯುವ ಕಡೆಯಲ್ಲಿ ಅಂತ ಎಂದು ಬರೆಯುತ್ತಾರಂತೆ. ಉದಾ: ಹಾಗಂತ, ಹೀಗಂತ ಇತ್ಯಾದಿ, ಸಿರೀಸ್ ಆಗಿ ಬಂದ ಕನ್ನಡ ಸಿನೇಮಾಗಳ ಹೆಸರು.

ಅಂತೆ - ಕಂತೆ: ಹೆಂಗಸರ ಸಂವಾದಗಳನ್ನು ಗಂಡು ಹುಳುಗಳು ವಿವರಿಸುವ ರೀತಿ

ಅಂಕಣ: ಕೆಲವು ಸಾಹಿತಿಗಳಿಗೆ ಅಂಕಣ ಬರಹದ ಚಟವಿದೆಯಂತೆ. ಅಂಕಣ ಬರೆಯೋನಿಗೆ ಅಕಾಡೆಮಿ ಪ್ರಶಸ್ತಿ ಬೇರೆ - ಗಾದೆ.

ಅಂಕಿತ: ಕೊಂಚ ಕೊಂಚ ಕಿತ್ತು ತಿನ್ನುವುದು.

ಅಂಕುಡೊಂಕು: ಹೋಟೆಲಿನಲ್ಲಿ ಕೊಡುವ ಶಾವಿಗೆ ಭಾತು. ಶಾವಿಗೆ ಡೊಂಕಾದರೆ ರುಚಿ ಡೊಂಕೇ? - ಗಾದೆ.

ಅಂಕುರ: ಮೈಮೇಲೆ ಕುರುವೆದ್ದಾಗ ಪಡುವ ಹಿಂಸೆ. ಕುರುವಿಗೆ ಅಂಕುರಿಸಿದ ಹಾಗೆ - ಗಾದೆ.

ಅಂಕುಶ: ಇಂಗ್ಲಿಷಿನಲ್ಲಿ ಇದಕ್ಕೆ ವಿಪ್ ಎನ್ನುವರಂತೆ. ಪಂಪನಿಗೆ ಪ್ರಿಯವಾದ ಪದ-ಆರಂಕುಶ ವಿಟ್ಟೊಡಂ...

ಅಂಕೆ: ಹದಿನೆಂಟನೇ ಶತಮಾನದಲ್ಲಿ ಪ್ರಚಲಿತವಿದ್ದ ಪದ. ಈಗಿನ ಮಾರ್ಕ್ಸ್ ಎಂಬ ಪದಕ್ಕೆ ಹತ್ತಿರವಾದದ್ದು.

ಅಂಗ: ಷರ್ಟು-ಪ್ಯಾಂಟು ತೂರಿಸಬಹುದಾದ ದೇಹದ ಭಾಗ.

ಅಂಗಜ: ಹಳೇ ನಾಟಕಗಳಲ್ಲಿ ನಾಯಕಿ ನಾಯಕನನ್ನು ಹೀಗೇ ಕರೆಯುತ್ತಿದ್ದುದು.

ಅಂಗಡಿ: ತಿಂಗಳು ಪೂರ್ತಿ ಬೆವರು - ರಕ್ತ ಹರಿಸಿ ಸಂಪಾದಿಸಿದ ಹಣದ ವಸೂಲಿ ಜಾಗ.

ಅಂಗತ್ತ: ಮಲಗಿದವನಿಗೆ ಸೂರ್ಯನ ಹಂಗೇನು? - ಗಾದೆ.

ಅಂಗಲಾಚು: ಮಂತ್ರಿ ಪದವಿ ಗಿಟ್ಟಿಸಲು ಹಾತೊರೆಯುವವರು ಮಾಡುವ ಕ್ರಿಯೆ.

ಅಂಗಾರ: ಹಿಂದೆ ಊಟ ಆಗಿದೆಯೋ ಇಲ್ಲವೋ ಎಂದು ತಿಳಿಯಲು ಹಣೆ ಮೇಲಿನ ಅಂಗಾರ ನೋಡುತ್ತಿದ್ದರಂತೆ. ಈಗ ಕೈವಾಸನೆ ನೋಡಿದರೆ ಸಾಕು.

ಅಂಗಿ: ನಮ್ಮನ್ನು ಮತ್ತೂ ವಿಕಾರವಾಗಿ ಕಾಣಿಸುವಂತೆ ನಮ್ಮ ದರ್ಜಿ ತಯಾರಿಸುವ ಒಂದು ವಿಶಿಷ್ಟ ಸಾಧನ.

ಅಂಗೀಕಾರ: ಕಾರಿನ ಮೇಲೆ ಹೊದಿಸಿರುವ ಅಂಗಿ.

ಅಂಗುಲ: ಬೆಂಗಳೂರಿನಲ್ಲಿ ನಿವೇಶನಗಳನ್ನು ಅಂಗುಲದ ಲೆಕ್ಕದಲ್ಲಿ ಹೇಳುತ್ತಾರಂತೆ. ಅಂಗುಲಕ್ಕೆ ಅಂಜದವನು ಅಂಗಿಗೆ ಅಂಜುವನೇ? - ಗಾದೆ.

ಅಂಗೈ: ನೆಲ್ಲಿಕಾಯಿ ಇಡುವ ಜಾಗ. ಅಂಗೈಯಲ್ಲಿ ನೆಲ್ಲಿಕಾಯಿ - ಗಾದೆ.

ಅಂಚಲ: ಚಂಚಲಳ ತಂಗಿ

ಅಂಚು: ಹಿಂದೆ ಚಿಲ್ಲರೆ ಕಾಸು ಕಟ್ಟಿಕೊಳ್ಳುತ್ತಿದ್ದ ಪಂಚೆಯ ತುದಿ.

ಅಂಜನ: ರಾಜಕಾರಣಿಗಳು ನಮಗೆ ಹಚ್ಚುವ ಮುಲಾಮು.

ಅಂಜೂರ: ತ್ರೇತಾಯುಗದಲ್ಲಿ ನಮ್ಮ ಋಷಿಗಳು ಇದನ್ನು ತಿನ್ನುತ್ತಿದ್ದರಂತೆ,

ಅಂಟು: ಸಾಲಗಾರನಿಗೂ ಮಾರವಾಡಿಗೂ ಕ್ರೆಡಿಟ್ ಕಾರ್ಡು ಹೋಲ್ಡರುಗಳಿಗೂ ಬ್ಯಾಂಕುಗಳಿಗೂ ಇರುವ ಬಾಂಧವ್ಯ. ಅಂಟು ಹೆಚ್ಚಿದರೆ ಗಂಟು ಹೆಚ್ಚೀತೇ? - ಗಾದೆ.

★★★

ಇಪ್ಪತ್ತಕ್ಕೆ ಮಾರ್ಕ್ಸ್....!

– ಜೀಕೆ

ಮಟ ಮಟ ಮಧ್ಯಾಹ್ನ ಎರಡೂವರೆ ಘಂಟೆಗೆ ಸರಿಯಾಗಿ ಹಣೆ ಮೇಲೆ ಅಂಗಾರ ಅಕ್ಷತೆ ಹಚ್ಚಿಕೊಂಡಿರೋ ಗೋಪಣ್ಣ ರಾಘವೇಂದ್ರಸ್ವಾಮಿ ಮಠದಿಂದ ಆಚೆ ಬರುತ್ತಿರೋದು ನೋಡಿ ಅಲ್ಲೇ ನನಗೆ ಕಣ್ಣು ಕತ್ತಲೆ ಕಂಡುಬಂದ ಹಾಗೆ ಆಗಿ ಬೀಳೋ ತರಹ ಆಯಿತು. ರಾಘವೇಂದ್ರ ಸ್ವಾಮಿಗಳ ಮಠದಿಂದ ಅದೆಷ್ಟೋ ಮಂದಿ ಇದೇ ಸಮಯಕ್ಕೇನೇ ಪೊಗದಸ್ತಾಗಿ ಉಂಡು ಆಚೆ ಬರೋದೂ, ಅದರಲ್ಲಿ ನಿನ್ನ ಕಣ್ಣು ಯಾಕೆ ಕತ್ತಲೆ ಕವಿದುಕೊಳ್ಳಬೇಕು ಅಂತ ನೀವು ಕೇಳ್ತೀರಿ ಅಂತ ನನಗೆ ಗೊತ್ತು. ಒಂದೇ ಒಂದು ನಿಮಿಷ ತಡೆದುಕೊಳ್ಳಿ, ಮೊದಲು ನಿಮಗೆ ಈ ಗೋಪಣ್ಣನ ವಿಷಯ ಹೇಳಿಬಿಟ್ಟು ನಂತರ ಕಣ್ಣು ಮತ್ತು ಕತ್ತಲೆಯ ಸಂಗತಿಗೆ ಬರ್ತೀನಿ.

ಈ ಗೋಪಣ್ಣ ನಿಮಗೆ ಗೊತ್ತಿಲ್ಲ ಅಂತ ನನಗೆ ಗೊತ್ತು. ನಲವತ್ತು ವರ್ಷದಿಂದ ನಾನು ಈತನನ್ನ ಬಲ್ಲೆ. ತುಂಬಾ ಸಂಪ್ರದಾಯಸ್ಥ ಕುಟುಂಬದ ಹಿನ್ನೆಲೆ ಇವನದ್ದು, ನಾನೂ ಅವನೂ ಒಟ್ಟಿಗೇ ಸ್ಕೂಲು ಕಾಲೇಜೂ ಮುಗಿಸಿದವರು ಮತ್ತು ಇಬ್ಬರೂ ಒಟ್ಟಿಗೇನೇ ವಕೀಲೀ ಪರೀಕ್ಷೇನೂ ಸಹ ಮಾಡಿದೋರು. ಚಿಕ್ಕಂದಿನಿಂದ ಇವನು ಒಂದು ರೀತಿ ವೈಚಾರಿಕ ಭಾವನೆಗಳನ್ನ ಬೆಳೆಸಿಕೊಂಡು ಬಂದೋನು ಮತ್ತು ದೇವರು ಧರ್ಮ ಅನ್ನೋದು ಅಫೀಮು ಅಂಬೋ ಮಾರ್ಕ್ಸ್‌ನ ಹೇಳಿಕೆಯನ್ನ ನಂಬಿದೋನು, ಇನ್ನೂ ಮಿಗಿಲಾಗಿ ನೂರು ದೇವರನ್ನೆಲ್ಲಾ ನೂಕಾಚೆ ಎಂಬ ಕುವೆಂಪು ಹಾಡನ್ನ ಚಾಚೂ ತಪ್ಪದ ಹಾಗೆ ಪಾಲಿಸಿಕೊಂಡು ಬಂದೋನು. ಚಾಚೂ ತಪ್ಪದೇ ಅಂತ ಯಾಕೆ ಹೇಳಿದೆ ಅಂದರೆ ಅದಕ್ಕೆ ಒಂದೆರಡು ದೃಷ್ಟಾಂತಗಳನ್ನು ನಿಮಗೆ ಹೇಳಬೇಕು.

ಗೋಪಣ್ಣನ ಮದುವೆಯಾದ ಸಂದರ್ಭದ ದೃಷ್ಟಾಂತ ಮೊದಲನೆಯದು.

ಈ ಕಥೆಗೆ ನಾನೇ ಪ್ರತ್ಯಕ್ಷ ಸಾಕ್ಷಿಯಾಗಿರುವುದರಿಂದ ಇದರಲ್ಲಿ ಅಂತಹ ಉತ್ಪ್ರೇಕ್ಷೆಯೇನೂ ಇಲ್ಲ ಅಂತ ಮೊದಲೇ ನಿಮಗೆ ತಿಳಿಸಿಬಿಡುತ್ತೇನೆ. ಗೋಪಣ್ಣ ಮದುವೆ ಮಾಡಿಕೊಳ್ಳಬೇಕು ಅಂತ ತೀರ್ಮಾನಿಸುವಷ್ಟರಲ್ಲಿ ಆಗಲೇ ಇವನಿಗೆ ಈ ಧರ್ಮ ಅಂಬೋದು ಅಫೀಮು, ಸಮಾಜದಲ್ಲಿ ಮೇಲುವರ್ಗದ ಜನರು ಮಿಕ್ಕವರನ್ನೆಲ್ಲಾ ಮೊದಲಿಂದಲೂ ಶೋಷಿಸಿಕೊಂಡೇ ಬಂದಿದ್ದಾರೆ ಅದರಿಂದಲೇ ಇವತ್ತೂ ಸಹ ಜಗತ್ತು ಹೀಗೇ ಇದೆ ಮತ್ತು ಶೋಷಣೆ ಮಾಡುವವರು ಅದೇ ರೀತಿಯಲ್ಲೇ ಬದುಕು ಸಾಗಿಸುತ್ತಿದ್ದಾರೆ ಎಂಬ ನವ ನವೀನ ಐಡಿಯಾಗಳು ತಲೆ ತುಂಬಾ ತುಂಬಿಹೋಗಿತ್ತು. ದೇವರು ಎಂಬ ಪದ ಎಲ್ಲಿ ಬರುತ್ತೋ ಅಲ್ಲಿಂದಲೇ ಮೇಲು ಕೀಳು ಎಂಬ ಅಂತರವೂ ಸಹ ಹುಟ್ಟುತ್ತೆ ಅಂತ ತುಂಬಾ ಬಲವಾಗಿ ನಂಬಿಬಿಟ್ಟಿದ್ದ. ಕ್ರಾಂತಿಯೆಂಬೋ ಮೊದಲ

ಹೆಜ್ಜೆಯನ್ನು ಮನೆಯಿಂದಲೇ ಆರಂಭಿಸತಕ್ಕದ್ದು ಅಂತ ಅದ್ಯಾರೋ ದಾರ್ಶನಿಕ ಹೇಳಿರುವನಂತೆ. ಈತನೂ ಸಹ ಅದನ್ನೇ ಜಾರಿಗೆ ತಂದುಬಿಟ್ಟಿದ್ದ. ಅದರ ಮೊದಲನೇ ಹೆಜ್ಜೆ ಅಂದರೆ ಹಳೇ ಸಂಪ್ರದಾಯಗಳನ್ನು ಕಿತ್ತು ಬಿಸಾಕಿ ಬಿಡೋದು. ಅದಕ್ಕೆ ಪೂರಕವಾಗಿ ಮೊದಲನೇ ಕೇತೆ ಇವನು ತೆಗೆದದ್ದು ಜನಿವಾರ ತೊಡಬಾರದು ಅಂಬೋದು. ಜನಿವಾರ ತೊಟ್ಟರೆ ನಾನು ಮಿಕ್ಕವರಿಗಿಂತಲೂ ಮೇಲು ಅಂಬೋ ಭಾವನೆ ಬರುತ್ತೆ, ಆದರಿಂದ ನನಗೆ ಮುಂಜಿ ಬೇಡಾ ಅಂತ ಹಠ ಹಿಡಿದ.

ಹುಡುಗು ಮುಂಡೇದು ತಳ ಹತ್ತಿಲ್ಲ ಮೇಲೆ ಬೆಂದಿಲ್ಲ ಅದೇನು ಹಾರಾಡುತ್ತೋ ಹಾರಾಡಲೀ ಅಂತ ಮನೆಯವರು ಸರಿ ಬೇಡ ಅಂದರೆ ಬೇಡ ಬಿಡು ಅಂತ ತೆಪ್ಪಗಾದರು - ಹೇಗಿದ್ದರೂ ಮದುವೆ ಆಗಬೇಕಾದರೆ ಜನಿವಾರ ತೊಡದೇ ಹೇಗೆ ಮದುವೆ ಆಗುತ್ತೆ ಅಂಬೋ ಸಮಾಧಾನದಲ್ಲಿ!

ಮದುವೆಗೆ ಹುಡುಗಿ ಹುಡುಕುವ ಕಾರ್ಯ ಆರಂಭವಾದಾಗ ನಾನು ಮದುವೆಯಾಗೋನು, ಹುಡುಗಿ ನನಗೆ ನನ್ನ ರೀತಿ ನೀತಿಗೆ ತಕ್ಕವಳಾಗಿರಬೇಕು - ಅಂದ. ಮನೆಯವರು ಸರಿ ಅಂತ ಹೇಳಿ ಸುಮಾರು ಹುಡುಗೀರನ್ನ ತೋರಿಸಿದರಂತೆ - ಈ ಸಂಖ್ಯೆ ನೂರಕ್ಕೂ ಮೀರಿರಬಹುದು ಎಂದು ಒಂದು ಅಂದಾಜು. ನೋಡಿದ ಯಾವ ಹುಡುಗಿಯೂ ಇವನ ಮನಸ್ಸಿಗೆ ಬರಲಿಲ್ಲ ಅಥವಾ ಬಂದರೂ ಇವನು ಮದುವೆಯಾಗಬೇಕಾದರೆ ಪಾಲಿಸಲೇಬೇಕಾದ ಕಂಡೀಷನ್ನುಗಳನ್ನು ಕೇಳಿ ಒಮ್ಮೆ ಬಂದೋರು ಮತ್ತೆ ಇತ್ತ ತಿರುಗಿಯೂ ಸಹ ನೋಡಲಿಲ್ಲ. ಅದೇನಪ್ಪಾ ಇವನ ಕಂಡೀಷನ್ನು ಅಂದರೆ ಮದುವೆಯನ್ನ ಧಾಂ ದೂಂ ಅಂತ ಮಾಡಬಾರದು, ಮದುವೆಗೆ ಪುರೋಹಿತರು ಇರಬಾರದು, ಮದುವೆ ಛತ್ರಕ್ಕೆ ಚಪ್ಪರ ಹಾಕಬಾರದು, ಓಲಗ ಪಾಲಗ ಊದಿಸಬಾರದು, ಯಾರಿಗೂ ಕಾಲಿಗೆ ಬಿದ್ದು ನಮಸ್ಕಾರ ಮಾಡು ಅಂತ ಹೇಳಬಾರದು, ಮದುವೆ ಹಸೆಮಣೆ ಮೇಲೆ ನಾನು ಷರ್ಟು ಹಾಕ್ಕೊಂಡೇನೇ ಕೂತ್ಕೊಂಬೋದು=ಷರಟು ಗಿರಟು ಬಿಚ್ಚಿ ಅರ್ಧ ಬೆತ್ತಲೆ ಕೂಡೋದಿಲ್ಲ, ಮದುವೆ ಮನೇಲಿ ಹೋಮಗೀಮ ಅಂತ ಮಾಡಕೂಡದು, ಹೊಗೆ ಹತ್ತಿಸಿ ಹಿಂಸೆ ಕೊಡಬಾರದು, ನಾನು ದೇವರನ್ನು ನಂಬೋದಿಲ್ಲ ಆದದರಿಂದ ಅಲ್ಲಿ ಯಾವ ದೇವರ ಪೂಜೆಗಳೂ ನಡೀಬಾರದು, ನನ್ನ ಹಣೇಗೆ ಕುಂಕುಮ ಗಿಂಕುಮ ಹಚ್ಚಬಾರದು, ಮುದ್ರೆ ಒತ್ತಿಕೋ ಅಂತ ಹೇಳಬಾರದು... ಹೀಗೆ ಸಾವಿರದ ಎಂಟು ಕಂಡೀಷನ್ನುಗಳನ್ನು ಹಾಕಿದ್ದ-ಅದರೆ ಒಂದು ಥರಹಾ ಸೆಮಿಕ್ರ್ಯಾಕ್ ಅಟ್ಟಿಟ್ಯೂಡು. ಯಾವುದಾದರೂ ಹುಡುಗೀನ ಮೊದಲು ಇವನು ಒಪ್ಪಲಿ ಆಮೇಲೆ ಇವನನ್ನ ದಾರೀಗೆ ತರೋಣ ಅಂತ ಇವನ ಮನೆಯವರು! ಆದರೆ ಇವನೇ ಹುಡುಗಿಯನ್ನು ನೋಡುಕ್ಕೆ ಮೊದಲೇ ಈ ತಿಕ್ಕಲು ಐಡಿಯಾಗಳನ್ನು ಹುಡುಗಿಯನ್ನು ತೋರಿಸಲು ಬಂದವರ ಎದುರು ಹರವಿಬಿಡುತ್ತಿದ್ದ. ಇಂತಹ ಕ್ರ್ಯಾಕ್ ಅನ್ನ ಮದುವೆಯಾಗಿ ನಂತರ ಹುಡುಗಿ ಪಡಬೇಕಾದ

ಅವಸ್ಥೆಯನ್ನು ನೆನೆಸಿಕೊಂಡು ಹುಡುಗಿಯ ಕಡೆಯ ಜನ ಆಗಲೇ ಕಾಲು ಕೀಳುತ್ತಿದ್ದರು. ಸುಮಾರು ಬಾರಿ ಇದು ರಿಪೀಟು ಆದ ನಂತರ ಇವನ ಸ್ಟ್ರಾಟೆಜಿ ಬದಲಾಯಿತು. ಅದು ಹೇಗೆ ಅಂದರೆ ಮೊದಲು ಹುಡುಗಿಯನ್ನ ನೋಡೋದೂ ನಂತರ ಹುಡುಗಿ ಒಪ್ಪಿಗೆಯಾದರೆ ಈ ಕಂಡೀಷನ್ನುಗಳನ್ನು ಹಾಕೋದು! ಇದೂ ಸಹ ಫೈಲ್ ಆಗಿಯೇ ಇವನು ಅಷ್ಟೊಂದು ಹುಡುಗೀರನ್ನ ನೋಡೋ ಹಾಗೆ ಆಗಿದ್ದು.

ಅಷ್ಟೊಂದು ಕಷ್ಟ ಯಾಕಯ್ಯಾ ಯಾರನ್ನಾದರೂ ಲೋವು ಮಾಡು ಅಥವಾ ಬೇರೆ ಜಾತಿ ಹುಡುಗೀನ ಮದುವೆಯಾಗು - ಕೋರ್ಟಿನಲ್ಲಿ ರಿಜಿಸ್ಟರ್ ಮದುವೆಯಾಗಿಬಿಡು, ಈ ತಾಪತ್ರಯವೇ ಇರೋದಿಲ್ಲವಲ್ಲ ಅಂತ ನಾವು ಗೆಳೆಯರು ಅಂತ ಅನಿಸಿಕೊಂಡೋರು ಸಲಹೆಯನ್ನೂ ನೀಡಿದ್ದೆವು. ಹುಡುಗೀನ ಈಗ ಲೋವು ಮಾಡೋದು ಅಂದರೆ ಕಾಲ ಮಿಂಚಿದೆ ಕಣ್ರಯ್ಯಾ ಅದೆಲ್ಲಾ ಕಾಲೇಜಿನ ದಿನಗಳಲ್ಲಿ ಅಂದರೆ ಸರಿ ಈಗ ಆಗುತ್ತಾ ಅಂತ ಅವನ ಪ್ರಶ್ನೆ. ಅದೂ ಸರೀನೇ ಅಂತ ಅನ್ನಿಸಿತ್ತು ಯಾಕೇ ಅಂದರೆ ಆತ ಕಾಲೇಜು ಮುಗಿಸಿ ಆಗಲೇ ಎಂಟು ಹತ್ತು ವರ್ಷವಾಗಿತ್ತು, ಈಗ ಕೆಲಸಕ್ಕೆ ಬೇರೆ ಸೇರಿದ್ದ, ಕೆಲಸಕ್ಕೆ ಸೇರಿರೋ ಕಡೆ ಇವನಿಗೆ ಲೋವು ಮಾಡಲು ಇಷ್ಟವಿಲ್ಲ! ಅದಕ್ಕಿಂತ ಹೆಚ್ಚಾಗಿ ಇವನನ್ನು ಈ ಮನ್ಮಥನನ್ನು ಲೋವು ಮಾಡುವಂತ ಯಾವ ಹುಡುಗಿಯೂ ಸಿಕ್ಕಲಿಲ್ಲ! ಪರಿಸ್ಥಿತಿ ಹೀಗೆ ಸುಮಾರು ದಿವಸಗಳು ನಡೆದ ಮೇಲೆ ಮತ್ತೊಮ್ಮೆ ಇವನ ಸ್ಟ್ರಾಟೆಜಿ ಬದಲಾಯಿತು. ನಿಮ್ಮ ಹುಡುಗೀನ ಮದುವೆಯಾಗಬೇಕಾದರೆ ನೀವು ಕೆಲವು ಷರತ್ತುಗಳಿಗೆ ಒಪ್ಕೊಬೇಕು ಅಂಬುವ ವಾದ ಮಂಡಿಸಲು ಆರಂಭಿಸಿದ. ಷರತ್ತುಗಳು ಅಂದಕೂಡಲೇ ಹುಡುಗಿಯನ್ನು ತೋರಿಸಲು ಬಂದಿರುವವರು ಕೈ ಹೊಸೆಯುತ್ತಾ ನಮ್ಮ ಕೈಲಿ ವರದಕ್ಷಿಣೆ ನೀಡಲು ಸಾಧ್ಯವಿಲ್ಲ ನಮಗೆ ಸರಿತೋರಿದ ಹಾಗೆ ನಮ್ಮ ಶಕ್ತಿ ಮೀರಿ ಮದುವೆಯನ್ನು ಅದ್ದೂರಿಯಾಗೇ ಮಾಡುತ್ತೇವೆ ಎಂಬ ಡಯಲಾಗು ಹಾಕುತ್ತಿದ್ದರು. ಏನೋ ಮಾಡುಕ್ಕೆ ಹೋದರೆ ಅದೇನೋ ಆಗುತ್ತಿದೆಯಲ್ಲಾ ಅನ್ನುವ ಯೋಚನೆ ಇವನಿಗೆ ಶುರುವಾಯಿತಂತೆ ಆಗ ''ನೋಡಿ ಇವರೇ ಮದುವೆ ಅದ್ದೂರಿಯಾಗಿ ಆಗಲೀ ಅಂತ ಅಲ್ಲ ನಾನು ಷರತ್ತು ಹಾಕ್ತಿರೋದು, ಮದುವೆ ಮಾಡೇನೆ ಕೆಲವರು ಪಾಪರು ಆಗಿರೋದು ನನಗೆ ಗೊತ್ತು, ಮದುವೆ ಸಿಂಪಲ್ಲು ಆಗಿರಬೇಕು ನಿಮ್ಮಂಥಹವರಿಗೆ ಅದು ಹೊರೆಯಾಗಬಾರದು ಅಂತ ನಾನು ಹೀಗೆ ಹೇಳೋದು, ನನಗೇನೂ ವರದಕ್ಷಿಣೆ ಅಂತ ನೀವು ಕೊಡಬಾರದು ನೀವು ಕೊಟ್ಟರೂ ನಾನು ತಗೋಳೋಲ್ಲ ಅದನ್ನ ಅದು ನನ್ನ ತತ್ವಕ್ಕೆ ವಿರೋಧ, ವರಪೂಜೆ ಗಿರಪೂಜೆ ಅಂತ ನಿಮ್ಮನ್ನ ನಾನೇನೂ ಡಿಮ್ಯಾಂಡೂ ಮಾಡೋಲ್ಲ, ಅದೂ ಅಲ್ಲದೇ ನನಗೇ ಸಾಕಾದಷ್ಟು ಸಂಬಳ ಬರುತ್ತೆ ಅದು ನನಗೆ ಸಾಕು ನನ್ನ ಸಂಸಾರ ನಡೆಸೋಕ್ಕೆ...'' ಅಂತ ಶುರು ಹಚ್ಚಿ ಇವನ ಸರಳ ಮದುವೆಯ ಪ್ರಿನ್ಸಿಪಲ್ಲುಗಳನ್ನು ಬಂದವರ ತಲೆಯಲ್ಲಿ ತುಂಬಲು ಪ್ರಯತ್ನ ಪಡುತ್ತಿದ್ದ.

ಮದುವೆಯಾಗುವ ಹುಡುಗ ಮನೆಯ ಹಿರಿಯರನ್ನು ಮಾತುಕತೆಗೆ ಬಿಡದೇ ಇರೋದೂ, ವರದಕ್ಷಿಣೆ ಬೇಡ ಅಂಬೋದು ಇವೆಲ್ಲಾ ಇವನ ಬಗ್ಗೆ ಒಂದು ರೀತಿಯ ಗುಮಾನಿ ಹುಟ್ಟಿಸೋದು. ಇವನಲ್ಲಿ ಏನೋ ಐಬಿದೆ, ಅದಕ್ಕೇ ಹೀಗೆ ಹೇಳ್ತಿದಾನೆ ಅಂತ ಸಹಜವಾಗಿಯೇ ಹೆಣ್ಣು ಹೆತ್ತವರಿಗೆ ಸಂಶಯಗಳು ಬರೋದು. ಮತ್ತೆ ಬರ್ತೀವಿ ಅಂತ ಹೇಳಿ ಹೋದವರು ಮತ್ತೆ ಇವನ ಮನೆಯ ಕಡೆ ತಲೆ ಹಾಕದೇ ಸುಮಾರು ದಿವಸಗಳೂ ಕಳೀತು! ಕೊನೆಗೆ ಪೇಪರಿನಲ್ಲಿ ವಧು ಬೇಕಾಗಿದೆ ಅಂಬೋ ಜಾಹೀರಾತನ್ನೂ ನೀಡಿದ, ಇವನ ಕಂಡೀಷನ್ನುಗಳನ್ನೂ ಹಾಕಿದ. ಯಥಾ ಪ್ರಕಾರ ಮದುವೆ ಮಾಡಿಸಲು ಬಂದವರು ಇವನ ಈ ಐಡಿಯಾಗಳನ್ನು ಕೇಳಿ ಹೊಟ್ಟೆ ತುಂಬಾ ನಕ್ಕು ಹೋಗಿದ್ದೇ ಲಾಭವಾಯಿತು. ಇದು ಒಂದು ಹಂತ ಅಂತ ಇಟ್ಟುಕೊಳ್ಳಿ. ಈಗ ಎರಡನೇ ಹಂತಕ್ಕೆ ಪ್ರವೇಶ!

ಕೊನೆಗೂ ದೇವರು ಇವನ ಮೇಲೆ ಕಣ್ಣು ಬಿಟ್ಟ! (ಈತ ದೇವರನ್ನು ನಂಬದಿದ್ದರೂ ದೇವರು ಈತನನ್ನು ನಂಬಿದ ಅಂತ ನಮ್ಮ ಗುಂಪಿನಲ್ಲಿ ಒಂದು ಜೋಕು ಆಗ ಪ್ರಚಲಿತವಾಗಿತ್ತು). ಇವನ ತತ್ವಗಳಿಗೆ ಮತ್ತು ಇವರ ಷರತ್ತುಗಳಿಗೆ ಸ್ಪಂದಿಸುವ ಹೆಂಡತಿ ಇವನಿಗೆ ದೊರೆತಳು! ಇವನ ಕಂಡೀಷನ್ನಿನ ಹಾಗೆಯೇ ಛತ್ರದ ಮುಂದೆ ಚಪ್ಪರವಿಲ್ಲದೇ, ಓಲಗವನ್ನು ಊದಿಸದೇ, ಹೋಮ ಹವನಗಳಿಲ್ಲದೇ, ಪುರೋಹಿತರ ಮಂತ್ರಗಳೂ ಇಲ್ಲದೇ, ನಮ್ಮ ನಾಯಕ ಷರ್ಟನ್ನೂ ತೊಟ್ಟುಕೊಂಡೇ ಹಸೆಮಣೆಯ ಮೇಲೆ ಕೂತು ಹೆಂಡತಿಗೆ ಅಲ್ಲ ಸಾರಿ ಹುಡುಗಿಗೆ ತಾಳಿ ಕಟ್ಟಿದ, ಷರತ್ತಿನಂತೆ ಯಾರ ಕಾಲಿಗೂ ನಮಸ್ಕಾರ ಮಾಡಲಿಲ್ಲ - ಎಲ್ಲರೂ ಸರಿ ಮತ್ತು ಸಮಾನರು ಎಂದೂ ಬಿಂಬಿಸಿದ! ವೈಚಾರಿಕ ಭಾವನೆಯವರು ತಾಳಿ ಕಟ್ಟಬಹುದೇ ಎಂಬ ದೊಡ್ಡ ಜಿಜ್ಞಾಸೆ ಆಗ ನಮ್ಮ ಗುಂಪಿನಲ್ಲಿ ಎದ್ದಿತ್ತು. ''ನನಗೇನೂ ತಾಳಿ ಪಾಳಿ ಕಟ್ಟಬೇಕು ಅಂತ ಇರಲಿಲ್ಲ, ನಿಮ್ಮ ಎಲ್ಲಾ ಷರತ್ತುಗಳಿಗೂ ನಾವು ಒಪ್ಪಿದೀವಲ್ಲಾ ನಮ್ಮದು ಒಂದೇ ಒಂದು ಷರತ್ತಿಗೆ ನೀವು ಹೂಂ ಅನ್ನಬೇಕು ಅಂತ ಕೇಳಿದರು ನಮ್ಮ ಮಾವ. ಅದೇನು ಹೇಳಿ ಅಂದೆ, ತಾಳಿ ಕಟ್ಟಬೇಕು ಅಂದರು, ಅದಕ್ಕೇ ಒಪ್ಪಿಕೊಂಡೆ, ಮದುವೇಲೀ ಎಲ್ಲರನ್ನೂ ಕೂಗಿ ಊಟ ಹಾಕಬೇಕು ಅಂದರು ಅದಕ್ಕೂ ಒಪ್ಪಿಕೊಂಡೆ, ಒಂದೇ ಒಂದು ಚೂರು ತೊಂದರೆ ಅನ್ನೋದು ನನ್ನ ಕಡೆಯಿಂದ ಆಗಬಾರದು ಅವರಿಗೆ ಅವರು ನನ್ನೆಲ್ಲಾ ಷರತ್ತುಗಳಿಗೂ ಒಪ್ಪಿಕೊಂಡು ಮದುವೆ ಮಾಡಿಕೊಟ್ಟವರು ಅಂತ ಅವರ ಬಗ್ಗೆ ನನಗೆ ಅಭಿಮಾನ ಇದ್ದೇ ಇದೆ...'' ಅಂತ ಈತ ವಿವರಣೆ ನೀಡಿದ್ದ.

ಇಂಥಹ ಎಬ್ಬಂಕನನ್ನು ಮದುವೆ ಮಾಡಿಕೊಂಡು ಹೆಣ್ಣು ಹೇಗೆ ಏಗುತ್ತಾಳೋ ಅಂತ ನಮಗೆ ಆಗ ಅನಿಸಿತ್ತು. ಹೇಗಯ್ಯಾ ಜೀವನ ಮಾಡುತ್ತೀ ಈ ತರಹದ ಐಡಿಯಾಗಳನ್ನ ತಲೇಲಿ ತುಂಬಿಕೊಂಡೂ ಅಂತಲೂ ಕೇಳಿದ್ದೆವು. ಏನಿಲ್ಲಾ ತುಂಬಾ ಸಿಂಪಲ್ಲು. ಡೆಮಾಕ್ರಟಿಕ್ ಸೆಟ್‌ಅಪ್ಪು ನಮ್ಮದು, ಹೆಂಡತಿ ಬೇಕಾದರೆ ದೇವಸ್ಥಾನಕ್ಕೆ ಹೋಗಲಿ,

ದೇವರ ಪೂಜೆ ಮಾಡಿಕೊಳ್ಳಲಿ ನಾನೇನೂ ಬೇಡಾ ಅಂಬೋದಿಲ್ಲಾ ಆದರೆ ನನ್ನನ್ನ ಪೂಜೆ ಮಾಡು ಗುಡೀಗೆ ಬಾ ಅಂತ ಕೂಗಬಾರದು ಅಂತ ಹೇಳಿದೀನಿ ಅಂದಿದ್ದ. ಇದನ್ನೂ ಪಾಲಿಸಿಕೊಂಡು ಬಂದ ಅಂತ ನಮಗೆ ಖಾತ್ರಿ ಯಾವಾಗ ಆಯಿತು ಅಂದರೆ ಈತ ದೇವಸ್ಥಾನದ ಮುಂದೆ ಗಂಟೆಗಟ್ಟಲೆ ಕಾದು ಹೆಂಡತಿ ಆಚೆ ಬಂದ ಮೇಲೆ ಅವಳನ್ನು ಕರೆದುಕೊಂಡು ಹೋಗುವುದನ್ನು ನೋಡಿದ ನಂತರ. ಹೆಂಡತಿ ಪೂಜೆ ಮಾಡುತ್ತಿದ್ದರೆ ಈತ ಯಾವುದೇ ತಕರಾರಿಲ್ಲದೇ ಪೂಜೆ ಮುಗಿಸೋವರೆಗೂ ಕಾದು ಕೂತಿರೋನು...! ಆಕೆ ಉಪವಾಸ ಮಾಡಿದರೆ ಹಣ್ಣು ತಂದು ಕೊಡೋನು, ಪೂಜೆಗೆ ಹೂವು ಕೊಂಡು ತರೋನು... ಪರವಾಗಿಲ್ಲ ಭೇಷ್ ನಂಬಿದ್ದನ್ನ ಚಾಚೂ ತಪ್ಪದೇ ಪಾಲಿಸುತ್ತಿದ್ದಾನೆ ಅಂತ ಇವನ ಮೇಲೆ ನಮಗೆಲ್ಲರಿಗೂ ಒಂದು ರೀತಿಯ ಅಭಿಮಾನ ಉಕ್ಕಿ ಹರಿದಿದ್ದೂ ಉಂಟು. ನಮ್ಮ ಕೈಲಿ ಕಿಸಿಯೋಕ್ಕೆ ಆಗದೇ ಇದ್ದದ್ದು ಬೇರೆಯವರು ಮಾಡಿದರೆ ಅಭಿಮಾನ ಹುಟ್ಟುಲ್ಲವೇ. ಹಾಗೇನೇ! ಇದು ಹಿನ್ನೆಲೆ! ಈಗ ಮುಂದಕ್ಕೆ....

ಎರಡನೇ ದೃಷ್ಟಾಂತವನ್ನು ಹೇಳಿಬಿಟ್ಟು ಮುಂದಕ್ಕೆ ಹೋಗೋಣ... ಇದನ್ನ ಹೇಗೆ ಹೇಳೋದು ಅಂತ ಒಂತರಾ ಆಗುತ್ತೆ, ಆದರೂ ಕತೆ ಮುಂದುವರಿಯೋಕ್ಕೆ ಇದೂ ಸಹ ಪೂರಕ ಅನ್ನಿಸೋದರಿಂದ ಹೇಳಿಬಿಡುತ್ತೇನೆ. ನಮ್ಮ ನಾಯಕನ ತಂದೆ ತೀರಿಕೊಂಡಾಗಲೂ ಇವನೇನು ಜನಿವಾರ ಹಾಕ್ಕೊಳ್ಳಿಲ್ಲ ಮತ್ತು ಇವನ ಅಣ್ಣಂದಿರು ಕರ್ಮಗಳನ್ನು ನಡೆಸುವಾಗ್ಗೆ ಮೂಕನಾಗಿ ದೂರ ನಿಂತು ವೀಕ್ಷಿಸುತ್ತಿದ್ದ. (ಇದು ದುಃಖದ ಸಂಗತಿಯಾದ್ದರಿಂದ ತುಂಬಾ ಚಿಕ್ಕ ಪ್ಯಾರಾದಲ್ಲಿಯೇ ಸಕಲವನ್ನೂ ತುಂಬಿದ್ದೇನೆ, ವಿವರ ನೀಡಬೇಕೂಂದರೆ ಇದನ್ನೂ ಸಹ ನೂರು ಪೇಜು ಬರೆಯಬಹುದು, ಆದರೂ ಇದನ್ನವಲಂಬಿಸಲಾರೆ)! ಆಗಲೂ ನಮಗೆ ಭೇಷ್ ಮಗನೇ ಅಂತ ಇವನ ಬಗ್ಗೆ ಅನಿಸಿತ್ತು.

ಈಗ ಮಠದ ಮುಂದೆ ಈತನನ್ನು ಈ ಅವತಾರದಲ್ಲಿ ನೋಡಿದಾಗ ಕಣ್ಣು ಕತ್ತಲೆ ಬರಬೇಕೋ ಬೇಡವೋ ನೀವೇ ಹೇಳಿ ಇವರೇ? ಹತ್ತಿರಕ್ಕೆ ನಡೆದೆ. ಎದುರು ಮುಖಾ ಮುಖಿಯಾದೆವು. ''ಏನಪ್ಪಾ ಹೇಗಿದ್ದೀ?'' ಅಂದ. ''ಇದೇನು ಹೊಸಾ ಅವತಾರ...?'' ಅಂತ ಕೇಳಲು ಹೊರಟವನು ಮಾತು ನುಂಗಿದೆ. ಚೆನ್ನಾಗಿದೀನಿ ಅಂತ ತಲೆಯಾಡಿಸಿದೆ. ''ಇದೇನು ಇಲ್ಲೀ....? ಅಂದೆ.

ಮುಂದೆ ಅವನು ಹೇಳಿದ್ದನ್ನ ಇಲ್ಲಿ ನಾನೇ ದಾಖಲು ಮಾಡ್ತಿದೀನಿ.

''ನಮ್ಮ ಮನೆ ವಿಷಯ ಗೊತ್ತಲ್ಲಾ?'' ಅಂದ. ತಲೆಯಾಡಿಸಿದೆ ಗೊತ್ತು ಅಂತ. ಅಂದ ಹಾಗೆ ಈತನ ಅಣ್ಣ ಒಬ್ಬರು ಡಯಾಬಿಟೀಸ್ ಖಾಯಿಲೆಯಿಂದ ನರಳಿ ಕಾಯಿಲೆಯ ಎಲ್ಲ ಅವಗುಣಗಳಿಗೂ ತುತ್ತಾಗಿ ತೀರಿದ್ದು ಗೊತ್ತು; ಮತ್ತೊಬ್ಬರು ಈಚೆಗೆ ಬೆನ್ನಿನ ಮೇಲೆ ಫಣಿ ಎದ್ದು ಸುಮಾರು ದಿವಸ ಆಸ್ಪತ್ರೆಯಲ್ಲಿದ್ದು ಬಂದಿದ್ದು ಗೊತ್ತು. ಎಲ್ಲರೂ ಇವನಿಗಿಂತಲೂ ದೊಡ್ಡವರೂ ಅನ್ನೋದು ಗೊತ್ತು ಆಸ್ಪತ್ರೆಯಲ್ಲಿದ್ದು ಬಂದವರಿಗೆ ಈಗ ಎಪ್ಪತ್ತಕ್ಕೆ ಮೀರಿದ

ವಯಸ್ಸೂ ಆಗಿದೆ ಅನ್ನೋದು ಗೊತ್ತು... ಬೇರೆ ಏನಾದರೂ ವಿಷಯ ಇದೆಯೇ? ಅದು ಗೊತ್ತಿಲ್ಲ! ಬೇರೆ ಸಂಗತಿಯಾದರೆ ಅವನೇ ಹೇಳಲಿ ಅಂತ ಕಾದೆ.

''ಹೋದ ವರ್ಷ ನಮ್ಮ ತಾಯಿ ತೀರಿಕೊಂಡರಲ್ಲಾ...''

''....ಗೊತ್ತು, ನಾನೂ ಬಂದಿದ್ದೆನಲ್ಲಾ...''

''ತಾಯಿ ತೀರಿಕೊಂಡ ಮೇಲೆ ಅವರ ಕರ್ಮ ಮಾಡೋದಿಕ್ಕೆ ದೊಡ್ಡ ಮಗ ಅಥವಾ ಕಿರೀ ಮಗ ಇವರು ಮಾಡಬಹುದು ಅಂತ ಪುರೋಹಿತರು ಹೇಳಿದರು. ದೊಡ್ಡವರು ಆಗತಾನೇ ಆಸ್ಪತ್ರೆಯಿಂದ ಬಂದಿದ್ದರು, ಮಧ್ಯದ ಅಣ್ಣ ಬಿಟ್ಟರೆ ಕೊನೆಯವನು ಅಂದರೆ ನಾನೇ ಉಳಿದಿದ್ದು. ನನಗೆ ಇದರಲ್ಲಿ ನಂಬಿಕೆಯಿಲ್ಲ. ಅಂತ ಹೇಳಿದ್ದರೆ ದೊಡ್ಡವರೇ ನಿಂತು ಕರ್ಮ ಮಾಡಬೇಕಿತ್ತು. ತಾಯಿ ಹೆಣ ಅಲ್ಲೇ ಎದುರಿಗಿದೆ. ಒಂದು ನಿಮಿಷ ಅಲ್ಲೇ ನಿಂತು ಯೋಚಿಸಿದೆ. ನಮ್ಮ ಯಾವುದೇ ನಿಲುವು ಸಿದ್ಧಾಂತಗಳಿದ್ದರೂ ಅದು ಸಮಾಜಕ್ಕೆ ಪೂರಕವಾಗಿರಬೇಕು ಬೇರೆಯವರನ್ನ ತೊಂದರೆಗೆ ದೂಡೋ ಹಾಗಿರಬಾರದು ಅಂತ ಮೊದಲಿಂದಲೂ ನಂಬಿಕೊಂಡು ಬಂದೋನು ನಾನು ಒಂದೇ ಒಂದು ಸಲ ನನ್ನ ನಂಬಿಕೆಗಳಿಂದ ಬೇರೆಯವರಿಗೆ ಹಿಂಸೆಯಾಗುತ್ತೆ ಅನ್ನುವ ಹಾಗಿದ್ದರೆ ಅಂತಹ ನಂಬಿಕೆಯನ್ನ ಕೊಂಚಕಾಲ ತಡೆದರೆ ಹೇಗೆ ಅನಿಸಿತು. ಒಂದೇ ಸೆಕೆಂಡು ಈ ಯೋಚನೆ ಬಂದಿದ್ದು. ಅಲ್ಲೇ ಅಪರಕರ್ಮ ಮಾಡಿಸೋಕ್ಕೆ ಅಂತ ಪುರೋಹಿತರು ಬಂದಿದ್ದರು, ಅವರನ್ನ ಕೇಳಿದೆ ''ನೋಡೀ ಸಾರ್ ನಮ್ಮಣ್ಣನಿಗೆ ಹೀಗೆ ತೊಂದರೆಯಿದೆ, ನಾನೇ ಕರ್ಮ ಮಾಡಬಹುದೇ? ನನಗೆ ಮುಂಜಿಯಾಗಿಲ್ಲ. ಮುಂಜಿಯಾಗಿಲ್ಲದೇ ಇರುವವರು ಕರ್ಮ ಮಾಡಿದರೆ ಅದಕ್ಕೆ ಲೀಗಲ್ ಸ್ಯಾಂಕ್ಷನ್ನು ನಿಮ್ಮ ಶಾಸ್ತ್ರ ಪುರಾಣಗಳ ಪ್ರಕಾರ ಸಿಗುತ್ತೇ....'' ಅಂತ ವಿವರಿಸಿ ಕೇಳಿದೆ. ತಾತ್ಕಾಲಿಕ ಯಜ್ಞೋಪವೀತಧಾರಣಂ ಅಂತ ಒಂದು ಮಂತ್ರ ಇದೆ, ಅದನ್ನ ಮಾಡಿಕೊಂಡರೆ ಸರಿ ಅಂದರು. ಟೆಂಪರರಿ ಕೆಲಸ ಇದ್ದ ಹಾಗೆ ಅದು, ಯಾರಿಗೂ ಯಾವ ರೀತಿಯ ಕಟ್ಟಳೆಗಳಿಂದ ಬೈಂಡಿಂಗ್ ಇಲ್ಲದೇ ಇರೋದಂತೆ ಇದು. ತಾಯಿ ಹೆಣದ ಮುಂದೇನೂ ಯಜ್ಞೋಪವೀತಧಾರಣೆಯಾಯಿತು. ಅಪರ ಕರ್ಮ ಮುಗಿಸಿದೆವು. ಇವತ್ತು ನಮ್ಮ ತಾಯೀದು ವೈಕುಂಠ. ಅದಕ್ಕೇ ಮಠಕ್ಕೆ ಬಂದು ಆ ಕೆಲಸ ಮುಗಿಸಿಕೊಂಡು ಹೊರಟಿದೀನಿ...'' ಅಂದ!

''ಅಲ್ಲವ್ರೋ ಗೋಪಣ್ಣ, ನಿನ್ನ ಬಂಧುಗಳು ಈ ನಿನ್ನ ಮೆಟಾಮಾರ್ಫಸಿಸ್ ಕುರಿತು ತಮಾಷೆ ಮಾಡಲಿಲ್ಲವೇ?'' ಅಂದೆ.

''ಮಾಡದೇ ಇರ್ತಾರಾ? ಚೆನ್ನಾಗೇ ಅವರವರಲ್ಲೇ ಸಖತ್ ತಮಾಷೆ ಮಾಡಿ ಖುಷಿ ಪಟ್ಟುಕೊಂಡರು, ಏನೋ ಹೇಗಿದ್ದವನು ಹೇಗಾದೀ ಅಂತ ರೇಗಿಸಿದರು. ಅಯ್ಯಾ ಬೇರೆಯವರಿಗೆ ತೊಂದರೆ ನೀಡಬಾರದು ಅಂತಲೇನೆ ನಾನು ಮೊದಲಿಂದಲೂ ಕೆಲವು ಸಂಪ್ರದಾಯಗಳನ್ನ ಅಳವಡಿಸಿಕೊಳ್ಳದೇ ಹೋಗಿದ್ದು. ನನ್ನ ಈ ನಿಲುವಿನಿಂದ ನಿಮಗೆ

ಯಾಆಗೇ ಆಗಲಿ ಯಾವತ್ತಾದರೂ ಒಂದೇ ಒಂದು ಚೂರು ತೊಂದರೆ ಕೊಟ್ಟಿದೀನಾ ಹೇಳಿ...?'' ಅಂದೆ. ಯಾರೂ ಉತ್ತರ ಕೊಡಲಿಲ್ಲ...! ಅಂದ ಹಾಗೇ ಮಠದಲ್ಲಿ ಊಟ ಎಷ್ಟು ಚೆನ್ನಾಗಿರುತ್ತೆ ಗೊತ್ತಾ? ಈಗ ಕರ್ಮ ಮಾಡೋದು ನಮ್ಮ ಇನ್ನೊಬ್ಬ ಅಣ್ಣನೇ, ಆದರೂ ಮಠದ ಊಟವನ್ನ ಎಷ್ಟೊಂದು ವರ್ಷ ಮಿಸ್ ಮಾಡಿಕೊಂಡೆನಲ್ಲಾ ಅಂತ ಮೊದಲನೇ ಸಲ ಮಠದಲ್ಲಿ ಊಟ ಮಾಡಿದಾಗ ಅನ್ನಿಸಿಬಿಟ್ಟಿತು.... ಇನ್ನೂ ತಮಾಷೆ ಗೊತ್ತಾ? ಪಿಂಡ ಕಟ್ತಾರಲ್ಲಾ ಉಂಡುಂಡೆಯಾಗಿ ಅದನ್ನ ನನ್ನ ಕೈಲೇ ಅಲ್ಲಿ ತಿಥಿ ಮಾಡಿಸೋರು ಕಟ್ಟಿಸೋದೂ... ಪಿಂಡವನ್ನು ಉಂಡುಂಡೆಯಾಗಿ ಕಟ್ಟುತ್ತಾ ಇರಬೇಕಾದರೆ ಹಾಗೇ ಒಂದು ಉಂಡೆಯನ್ನು ತಿಂದುಬಿಟ್ಟು ರುಚಿ ನೋಡಿಬಿಡಲೇ ಅಂತ ಅನ್ನಿಸಿಬಿಡ್ತುಕಣಯ್ಯಾ ಅದು ಹೇಗೋ ತಡಕೊಂಡೆ...'' ಅಂತ ಮಾತು ಮುಗಿಸಿದ. ಅಂದ ಹಾಗೇ ಯಾರಾದರೂ ಅದರ ರುಚಿ ನೋಡಿದಾರೇನಯ್ಯಾ ಅಂತ ಸೇರಿಸಿದ.

ಈಗ ಗೊತ್ತಾಯಿತಲ್ಲಾ ನನಗೆ ಕಣ್ಣು ಕತ್ತಲೆ ಹಿಡಿಸಿದ್ದು ಯಾಕೆ ಅಂತ?

ಅಂದ ಹಾಗೆ ಗೋಪಣ್ಣ ಯಾರು ಗೊತ್ತೆ? ನಮ್ಮನಿಮ್ಮಲ್ಲಿ ಎಲ್ಲರಲ್ಲೂ ಈ ಗೋಪಣ್ಣನ ಅಂಶ ಇರುತ್ತಂತೆ! ಚಿಕ್ಕ ವಯಸ್ಸಿನಲ್ಲಿ ಎಲ್ಲರೂ ಕೊಂಚ ಮಟ್ಟಿಗೆ ನಮ್ಮ ಕೈಲಿ ಸಾಧ್ಯ ಅನಿಸಿದಷ್ಟು ರೆಬೆಲ್ ನೇಚರನ್ನ ಹೊಂದಿರುತ್ತೇವಂತೆ ಮತ್ತು ಅದನ್ನು ಪ್ರಯೋಗಿಸಿಯೂ ಇರುತ್ತೇವಂತೆ! ಅದಕ್ಕೇ ಇಪ್ಪತ್ತಕ್ಕೆ ಮಾರ್ಕ್ಸ್ ನಲವತ್ತಕ್ಕೆ ರಾಘವೇಂದ್ರಸ್ವಾಮಿ ಅಂತ ಒಂದು ಗಾದೆಯೇ ಇದೆಯಂತೆ! ಮಾರ್ಕ್ಸ್ ಅಂದರೆ ಗೊತ್ತಲ್ಲಾ? ಅದೇ ಕಾರ್ಲ್‌ಮಾರ್ಕ್ಸ್ - ನಮ್ಮ ಕಮ್ಯೂನಿಷ್ಟು ಲೀಡರು - ಅದೇ ಸಮಾನತೆಯನ್ನು ಬೋಧಿಸಿದೋನು?



Mailing Date 5th of every month
Reg. No. CPMG/KA/BGW-544/2003-05

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: RAVI GRAPHICS, 60/2, 2nd Main Road, Industrial Town, Rajajinagar, Bangalore - 560 044. PH : 2330 5999. Editor: M. SHIVAKUMAR